29th Year of Publication.

Phone: 728.

ವಾರ್ಷಿಕ ಚಂದಾ
ಸ್ಥಳೀಯರಿಗೆ:
ಒಂದು ವರ್ಷಕ್ಕೆ ರೂ. 6—0—0.
ಆರು ತಿಂಗಳಿಗೆ ರೂ. 3—0—0.
ಪರಸ್ಥಳೀಯರಿಗೆ:
ಒಂದು ವರ್ಷಕ್ಕೆ ರೂ. 7—0—0.
ಆರು ತಿಂಗಳಿಗೆ ರೂ. 3—8—0.

ಪ್ರಭಾತ

ಬೆಲೆ: 12 ನ. ಪೈಸೆ

ಸಂಪುಟ: ೨೯. ಸಂಚಿಕೆ: ೧೪.) ಸಂಪಾದಕ: ಕುಡ್ವಿ ವಾಸುದೇವ ಶೆಣೈ. ರವಿವಾರ ತಾ. 5—5—1963 (Vol: XXIX. No.. 14.

ಕಲಬೆರಕೆಗೆ ಕಠಿನದಂಡನೆ ವಿಧಿಸಲಾಗುವುದು

ಆಹಾರ, ಔಷಧ ಮೊದಲಾದುವುಗಳ ಕಲಬೆರಕೆಗೆ ಅತೀ ಕಠಿನ ಶಿಕ್ಷೆ ವಿಧಿಸುವ ಬಗ್ಗೆ ಒಂದು ಮಸೂದೆಯನ್ನು ಕೇಂದ್ರ ಸರಕಾರದವರು ಸದ್ಯದಲ್ಲೇ ಲೋಕಸಭೆಯಲ್ಲಿ ಮಂಡಿಸಲಿದೆಯೆಂಬುದಾಗಿ, ಕಳೆದ ವಾರ, ಕೇಂದ್ರದ ಆರೋಗ್ಯ ಸಚಿವೆ ಡಾ| ಸುಶೀಲಾ ನಯ್ಯಾರ್‌ರವರು, ಶ್ರೀ| ಎಚ್. ವಿ. ಕಾಮತರವರು ಆರಂಭಿಸಿದ ಚರ್ಚೆಗೆ ಉತ್ತರವಾಗಿ ಹೇಳಿದರು. ಹಾಗೆ ಕಠಿನ ಶಿಕ್ಷೆ ವಿಧಿಸಲು ಸಾರ್ವಜನಿಕರೂ ಅಧಿಕ ಸಹಕಾರವೀಯಬೇಕೆಂದೂ ಆರೋಗ್ಯ ಸಚಿವೆ ಆಶಿಸಿ, ಆರು ವರ್ಷಗಳ ಕಾರಾಗ್ರಹವಾಸ ಮತ್ತಾ ವಿಧಿಸುವುದೂ ಈ ಮಸೂದೆಯಲ್ಲಿ ಕಾಣಿಸಲಾಗಿದೆ ಎಂದರು.

ಆಹಾರ ಕಲಬೆರಕೆ ಮಾಡುವುದು ಮಹಾ ಪಾಪ, ಅಪರಾಧಕ್ಕೆ ಬಹಿರಂಗ ಛಡಿಯೇಟಿನ ಶಿಕ್ಷೆ ಮತ್ತು ಈ ತಪ್ಪಿತನ ನಾಗರಿಕ ಹಕ್ಕುಗಳನ್ನು ಕಿತ್ತುಕೊಂಡು, ಅವನ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕುವುದು ತಕ್ಕ ಶಿಕ್ಷೆಯೆನಿಸಿತು —ಎಂದು, ಶ್ರೀ| ಎಚ್. ವಿ ಕಾಮತರವರು ಹೇಳಿದ್ದರು.

— —

ಹೊಸ ಟಪ್ಪಾಲು ದರಗಳು

ಇದೇ ತಾ. 1ರಿಂದ ಜ್ಯಾರಿಗೆ ಬಂದಿರುವ, ಏರಿಸಿದ ಅಂಚೆ ದರಗಳು, ಈ ಕೆಳಗಿನಂತಿವೆ.

	ನ. ಪೈ.
1. ಪೋಸ್ಟ್ ಕಾರ್ಡಿಗೆ	6
2. ರಿಪ್ಲೈ ಕಾರ್ಡಿಗೆ	12
3. ಬುಕ್‌ಪೋಸ್ಟ್ (50ಗ್ರೆಮ್)	10
4. ಪಾರ್ಸೆಲು (400 ಗ್ರೇ.)	60
ಹೆಚ್ಚಿನ (400 ಗ್ರೇ.) ಅಥವಾ ಅದರ ಅಂಶಕ್ಕೆ	60
5. ರಿಜಿಸ್ಟ್ರೇಶನ್ ಫೀ	55
6. ಎಕ್ನೊಲೆಜ್‌ಮೆಂಟ್ ಫೀ	10
7. ಇನ್ಸೂರೆನ್ಸ್ ಫೀ (ರೂ. 100).	10
8. ವಿ. ಪಿ. (ರೂ. 15ರ ವರೆಗೆ	5
ರೂ. 15ರಿಂದ 25 ರವರೆಗೆ	10
ರೂ. 25ರಿಂದ	15
9. ಸರ್ಟಿಫಿಕೇಟ್ ಓಫ್ ಪೋಸ್ಟಿಂಗ್	5
10. ಲೇಟ್ ಫೀ (ರಿಜಿಸ್ಟರ್ಡ್ ಮಾಡಲ್ಪಡದಕ್ಕೆ)	10
ರಿಜಿಸ್ಟರ್ಡ್ ವಸ್ತುವಿಗೆ	15
11. ಪೋಸ್ಟ್‌ಬೋಕ್ಸ್‌ಗೆ ರೂ	25

ಶಾಲಾ ವಿದ್ಯಾರ್ಥಿಗಳ ನ್ಯೂನ ಪೋಷಣೆ

ಮಹಾರಾಷ್ಟ್ರದ ತಜ್ಞರ ಒಂದು ಸಮಿತಿಯ ಅಭಿಪ್ರಾಯದಂತೆ, ಶಾಲಾ ಬಾಲಕರಲ್ಲಿ ಹೆಚ್ಚಿನವರು, ಪೌಷ್ಟಿಕ ಆಹಾರವಿಲ್ಲದೆ ಅರೆಹೊಟ್ಟೆಯಲ್ಲೇ ಬೆಳೆಯುತ್ತಿದ್ದಾರೆ. ಸೇನೆಗೆ ಸೇರಿಸಿಕೊಳ್ಳುವಾಗ ನಡೆದ ಪರೀಕ್ಷೆಗಳಲ್ಲಿ, ಇಂಥ ಅಬಲತನವು ಹಲವರಲ್ಲಿ ಕಂಡುಬಂದಿದೆ ಮಹಾರಾಷ್ಟ್ರದ ಸೆಕಂಡರಿ ಶಿಕ್ಷಣ ಇಲಾಖಾ ಸಭೆಯೊಂದು ಈ ದಿನ ಸೇರಿ, ಶಾಲಾ ಬಾಲಕರಿಗೆ ಮಧ್ಯಾಹ್ನ ಊಟ ಒದಗಿಸುವ ವಿಷಯವನ್ನು ನಿರ್ಧರಿಸುವುದು.

— —

"ಆಹಾರ ದಾನ್ಯಗಳ ಉಗ್ರಾಣಗಳು ತುಂಬಿಯೇ ಇವೆ"

"ನಮ್ಮ ಆಹಾರಧಾನ್ಯಗಳ ಉಗ್ರಾಣಗಳು ಪೂರ್ಣ ತುಂಬಿಯೇ ಇವೆ. ಆಹಾರ ಅಭಾವದ ಯಾವ ಅಂಜಿಕೆಯೂ ಇಲ್ಲ. ಅನಾವಶ್ಯಕವಾಗಿ ಅಭಾವದ ಪ್ರಶ್ನೆಗಳನ್ನೆತ್ತಿ, ಕೃತ್ರಿಮವಾಗಿ ಧಾರಣೆಗಳೇರುವಂತೆ ಮಾಡಬಾರದು—" ಎಂಬುದಾಗಿ ಕೇಂದ್ರದ ಆಹಾರ ಮಂತ್ರಿ ಶ್ರೀ| ಎಸ್. ಕೆ. ಪಾಟೀಲರು, ಕಳೆದ ವಾರ, ಲೋಕಸಭೆಯಲ್ಲಿ ಪ್ರಶ್ನೋತ್ತರಗಳಾದಾಗ ಹೇಳಿದರು.

— —

ಭಾರತಕ್ಕೆ ಬ್ರಿಟೈನಿನ ನೆರವು

ಭಾರತಕ್ಕೆ ಬ್ರಿಟೈನು ಮತ್ತು ಸಂಯುಕ್ತ ಅಮೆರಿಕವು ಮಿಲಿಟರಿ ನೆರವು ನೀಡುವ ವಿಷಯದಲ್ಲಿ ಬ್ರಿಟೈನು ಈಗ ತನ್ನ ಅಭಿಪ್ರಾಯವನ್ನು ಭಾರತದ ನಿರೀಕ್ಷೆಗೆ ತಕ್ಕಂತೆ ಬದಲಿಸಿದೆ; ಮತ್ತು ಕಾಶ್ಮೀರ ವಿವಾದ ತೀರ್ಮಾನ ವಿಷಯವನ್ನು ಈ ನೆರವಿಗೆ ಸಂಬಂಧಿಸದೇನೇ ಆ ನೆರವು ಕೊಡುವಂತಿದೆ—ಎಂದು, ಕಳೆದ ವಾರ ಸೇರಿದ "ಸೆಂಟೋ" ಸಭೆಯಲ್ಲಿ ಬಯಲಾಗಿದೆ.

— —

ಚಿತ್ರ ಬರೆವ ಯಂತ್ರ

ಜಗದ್ವಿಖ್ಯಾತ ಚಿತ್ರಕಾರ ಪಾಬ್ಲೋ ಪಿಕಾಸ್ಸೋ ಕೀಬೋರ್ಡ್ ಇರುವ ಚಿತ್ರ ಬರೆವ ಒಂದು ಯಂತ್ರವನ್ನು ತಾನು ತಯಾರಿಸಿರುವೆನಾಗಿ ಬಯಲುಪಡಿಸಿದ್ದಾರೆ. ಕೀಬೋರ್ಡಿನ ಕೆಲವ 'ಕೀ'ಗಳನ್ನು ಒತ್ತಿದರೆ, ತಾನು ಇಚ್ಛಿಸಿದ ಬಣ್ಣ ಮತ್ತು ಆಕಾರವು ಹಾದು ಅಲ್ಲಿನ ಕಾಗದದಲ್ಲಿ ಮೂಡಿಬರುವುದು. ಕಲಾಕಾರನ ಕಲ್ಪನೆಯು ಕೂಡುವಷ್ಟು ವೇಗದಲ್ಲಿ ಕುಂಚ ಹಿಡಿದ ಕೈಗಳು ಓಡಲಾರವು – ಅಂಥ ವೇಳೆ ಇಂಥ ಯಂತ್ರವು ಅವಶ್ಯ ಎಂದು ಪಿಕಾಸೋ ಹೇಳುತ್ತಾನೆ.

ಚಿತ್ರಕಲೆಯ ಯಾಂತ್ರೀಕರಣವು ಜಗತ್ತನ್ನೆಲ್ಲ ತುಂಬೀತು ಎಂಬ ಭಯವೇನೂ ಇಲ್ಲವಾದರೂ,, ಕಲೆಯ ವಿಕಾಸದಲ್ಲಿ ಇಂಥ ಯಂತ್ರಗಳು ಮನುಷ್ಯನ ಕೌಶಲ್ಯವನ್ನು ಕುಂಠಿತವಾಗಿ ಮಾಡುವುದೆಂದು ಪಿಕಾಸೋನಂಥವನಿಗೆ ತಿಳಿಯದಿದ್ದುದು ಆಶ್ಚರ್ಯ

ಮಹಾಭಾರತ ಕಥಾಮೃತ

(ಲೇಖಕ: ಶ್ರೀ ಕೋ. ಶ. ಕಾರಂತ, ಬಿ.ಎ., ಬಿ.ಎಲ್., ಎಡ್ವೋಕೇಟ್, ಮಂಗಳೂರು.)

ಯಕ್ಷಪ್ರಶ್ನೆ

(ಕಳೆದ ಸಂಚಿಕೆಯಿಂದ ಮುಂದುವರಿದುದು)

೪

ಯಕ್ಷ: ಯಾರು ನಿಜವಾಗಿ ಸುಖಿಯಾಗಿರುವರು? ಯಾವುದು ನಿಜವಾದ ಆಶ್ಚರ್ಯ? ಧರ್ಮ ಮಾರ್ಗ ಯಾವುದು? ವಾರ್ತಾ ಅಥವಾ ವರ್ತಮಾನವೆಂದರೇನು?

ಯುಧಿಷ್ಠಿರ: ಯಕ್ಷವರ್ಯ ಯಾರು ಪರದೇಶಕ್ಕೆ ಹೋಗದೆ ಋಣಬಾಧಕವಿಲ್ಲದೆ ತನ್ನ ಮನೆಯಲ್ಲಿಯೆ ಇದ್ದು ಮಿತ ಶಾಕಪಾಕವನ್ನು ಸಿದ್ಧಪಡಿಸಿ ಊಟ ಮಾಡಿಕೊಂಡಿರುವನೋ ಅವನೇ ನಿಜವಾದ ಸುಖಿಯು. ನಿನ್ನ ಎರಡನೆಯ ಪ್ರಶ್ನೆಯಾದ ಆಶ್ಚರ್ಯವೇನೆಂದು ವಿವರಿಸುತ್ತೇನೆ.

ಅಹನ್ಯಹನಿ ಭೂತಾನಿ ಗಚ್ಛಂತೀಹ
ಯಮಾಲಯಮ್।
ಶೇಷಾಃ ಸ್ಥಾವರಮಿಚ್ಛಂತಿ
ಕಿಮಾಶ್ಚರ್ಯಮತಃ ಪರಮ್
॥ ೧೧೬ ॥

ಈ ಸಂಸಾರದಲ್ಲಿ ದಿನ–ರಾತ್ರಿಯಲ್ಲಿಯೂ ಪ್ರಾಣಿಗಳು ಯಮಾಲಯವನು ಸೇರುತ್ತಿದ್ದಾವೆ. ಇದನ್ನು ನೋಡುತ್ತಿರವ್ರದಾದರೂ ಜನರು ತಾವು ಚಿರಂಜೀವಿಯಾಗಿ ಬದುಕಬೇಕೆಂದು ಅಪೇಕ್ಷಿಸುತ್ತಾರೆ. ಇದಕ್ಕಿಂತ ಆಶ್ಚರ್ಯವಾದ ಬೇರೊಂದು ವಿಚಾರವಿದೆಯೇ?

ತರ್ಕೋಽಪ್ರತಿಷ್ಠಾಃ ಶ್ರುತಯೋ
ವಿಭಿನ್ನಾ ನೈಕೋ ಋಷಿರ್ಯಸ್ಯ ಮತಂ
ಪ್ರಮಾಣಮ್
ಧರ್ಮಸ್ಯ ತತ್ವಂ ನಿಹಿತಂ ಗುಹಾಯಾಂ
ಮಹಾಜನೋ ಯೇನಗತಃ ಸ ಪಂಥಾ
॥ ೧೧೭ ॥

ತರ್ಕಕ್ಕೆ ಯಾವ ನೆಲೆಯೂ ಇಲ್ಲವು ಶ್ರುತಿಗಳು ಭಿನ್ನಭಿನ್ನವಾಗಿ ಸಾರುತ್ತಿವೆ. ಓರ್ವ ಋಷಿಯ ವಚನವಾದರೂ ಪ್ರಮಾಣವಾಗಿರುವುದಿಲ್ಲ. ಆದ್ದರಿಂದ ಧರ್ಮ ತತ್ವವು ಬಹ ಗೂಢವಾಗಿದೆ. ಆದ ಕಾರಣ ಮಹಾಪುರುಷರು ಅನುಸರಿಸಿ ಹೋಗುವ ಮಾರ್ಗವೇ ಧರ್ಮ ಮಾರ್ಗವು.

ಮಹಾಮೋಹ ರೂಪವಾದ ಪಾತ್ರೆಯಲ್ಲಿ ಭಗವಾನ್ ಕಾಲನು ಸಮಸ್ತ ಪ್ರಾಣಿಗಳನ್ನು ಪಾಕಗೈಯ್ಯುತ್ತಿದ್ದಾನೆ ಸೂರ್ಯನೇ ಆ ಪಾತ್ರೆಯನ್ನು ಕಾಯಿಸುವ ಬೆಂಕಿಯು. ಹಗಲು ರಾತ್ರಿಗಳೇ ಕಟ್ಟಿಗೆ. ಮಾಸ ಮತ್ತು ಋತು ಇವುಗಳು ಮರದ ಸಟ್ಟುಗಗಳು. ಈ ಪ್ರಕಾರ ಪ್ರಾಣಗಳನ್ನು ಪಾಕಮಾಡುವ ಅಡಿಗೆ ಭಟ್ಟನೇ ಕಾಲನಾಗಿರುವನು. ಇದಕ್ಕಿಂತ ಬೇರೆ ವಾರ್ತೆ ಇದೆಯೇ?

ಯಕ್ಷ: ನನ್ನ ಎಲ್ಲ ಪ್ರಶ್ನೆಗೆ ನೀನು ಯೋಗ್ಯವಾದ ಉತ್ತರವನ್ನಿತ್ತಿರುವಿ. ಆದರೆ, ನನ್ನ ಪ್ರಶ್ನೆಗಳು ಮುಗಿಯಲಿಲ್ಲವು. ಪುರುಷ ಎಂದರೆ ಯಾರು? ಅತ್ಯಂತ ಧನಿಕನಾರು?

ಯುಧಿಷ್ಠಿರ:
ದಿವಂ ಸ್ಪೃಶತಿ ಭೂಮಿಂ ಚ ಶಬ್ದಃ
ಪುಣ್ಯೇನ ಕರ್ಮಣಾ।
ಯಾವತ್ ಸ ಶಬ್ದೋ ಭವತಿ ತಾವತ್
ಪುರುಷ ಉಚ್ಯತೆ ॥ ೧೨೦ ॥

ಯಾರ ಪುಣ್ಯ ಕರ್ಮ ಮತ್ತು ಕೀರ್ತಿಗಳು ಭೂಲೋಕ ಮತ್ತು ಸ್ವರ್ಗಲೋಕವನ್ನು ಮುಟ್ಟುತ್ತಿರುವುದೋ ಅಷ್ಟರವರೆಗೆ ಅವನನ್ನು ಪುರುಷ ಎಂದು ಕರೆಯುತ್ತಾರೆ.

ತುಲ್ಯೇ ಪ್ರಿಯಾಪ್ರಿಯೇ ಯಸ್ಯ
ಸುಖದುಃಖೇ ತಥೈವ ಚ।
ಅತೀತಾನಾಗತೇ ಚೋಭೇ ಸ
ವೈ ಸರ್ವಧನೀ ನರಃ ॥ ೧೨೧ ॥

ಪ್ರಿಯವಾದದ್ದು, ಅಪ್ರಿಯವಾದದ್ದು, ಸುಖದುಃಖ ಮತ್ತು ಭೂತ ಭವಿಷ್ಯತ್ ಈ ಮೊದಲಾದ ದ್ವಂದ್ವಗಳನ್ನು ಯಾರು ಸಮಭಾವನೆಯಿಂದ ಸಹಿಸಿಕೊಂಡಿರುವರೋ ಅವರೇ ಅತ್ಯಂತ ಧನಿಕರು.

ಯಕ್ಷ: ಮಹಾರಾಜ! ಪುರುಷ ಮತ್ತು ಧನಿಕರ ವಿಚಾರ ಮಹತ್ವವಾದ ವ್ಯಾಖ್ಯಾನ ಮಾಡಿರುವುದರಿಂದ ನಾನು ಪರಮ ಸಂತುಷ್ಟನಾಗಿರುವೆನು. ಆದ್ದರಿಂದ ನೀನು ಈ ನಾಲ್ವರು ಸಹೋದರರಲ್ಲಿ ಒಬ್ಬರನ್ನು ಅಪೇಕ್ಷಿಸು. ಅವನು ಪುನರ್ಜೀವಿತನಾಗುವನು.

ಯುಧಿಷ್ಠಿರ: ಶ್ಯಾಮವರ್ಣ ಅರುಣನಂತೆ ಕಣ್ಣುಳ್ಳವನೂ ಮಹಾಬಾಹು ನಕುಲನನ್ನು ಅಪೇಕ್ಷಿಸುತ್ತೇನೆ. ಅವನು ಜೀವಂತವಾಗಲೆಂದು ಕರುಣಿಸಿರಿ.

ಯಕ್ಷ: "ಇದೇನು ರಾಜ? ನಿನಗೆ ಅತ್ಯಂತ ಪ್ರಿಯನಾದ ಭೀಮಸೇನನನ್ನು ಮಹಾ ಪರಾಕ್ರಮಿಯಾದ ಅರ್ಜುನನನ್ನು ಬಿಟ್ಟು ನಕುಲನನ್ನು ಮಾತ್ರ ಅಪೇಕ್ಷಿಸಿರುವ ಕಾರಣವೇನು? ಹತ್ತು ಸಾವಿರ ಆನೆಗಳ ಬಲದ ಪರಾಕ್ರಮಿಯಾದ ಭೀಮಸೇನನನ್ನು ತ್ಯಜಿಸಿ ನಕುಲನನ್ನು ಏತಕ್ಕಾಗಿ ಅಪೇಕ್ಷಿಸಿರುವೆ?

ಯುಧಿಷ್ಠಿರ: ಯಕ್ಷ! ದಯೆಗೆ ಸಮಾನವಾದ ಪರಮಧರ್ಮವಿಲ್ಲವು ಲೋಕದಲ್ಲಿ ಎಲ್ಲರೂ ಯುಧಿಷ್ಠಿರನು ಧರ್ಮಾತ್ಮ ಎಂದು ತಿಳಿದಿರುವರು. ನಾನು ಧರ್ಮದಿಂದ ಚ್ಯುತನಾಗಲಾರೆನು. ಆದ್ದರಿಂದ ನಕುಲನನ್ನು ಅಪೇಕ್ಷಿಸಿರುವೆನು. ನನಗೆ ಹೇಗೆ ಕುಂತಿ ಇರುವಳೋ ಹಾಗೆಯೇ ಮಾದ್ರಿಯು. ಇವರಲ್ಲಿ ನನಗೆ ಲವಲೇಶನ ಭೇದ ಭಾವನೆ ಇರುವುದಿಲ್ಲ. ಇಬ್ಬರಲ್ಲಿ ಸಮಾನ ಭಾವದಿಂದ ಮಾದ್ರಿಯ ಮಗನಾಗಿ ನಕುಲನನ್ನು ಅಪೇಕ್ಷಿಸಿರುವೆನು.

ಯಕ್ಷನು ಆಗ, ಭರತಶ್ರೇಷ್ಠ ಅರ್ಥ ಮತ್ತು ಕಾಮ ಇವೆರಡಕ್ಕೂ ಮೀರಿರುವುದು ದಯೆ. ನಿನ್ನ ದಯಾಹೃದಯದ ಸಮಾನ ಭಾವವನ್ನು ನೋಡಿ ನನಗೆ ಪರಮಸಂತೋಷವಾಗಿದೆ. ನಿನ್ನ ನಾಲ್ವರೂ ಸಹೋದರರು ನಿನ್ನ ಧರ್ಮಪ್ರಭಾವದಿಂದ ಜೀವಂತರಾಗುವರು" ಎಂದನು.

ಆಗ ಭೀಮಾದಿಗಳು ಎಚ್ಚರ ತಿಳಿದು ಎದ್ದರು. ಯುಧಿಷ್ಠಿರನು! ನೀನು ಯಕ್ಷನಲ್ಲವೆಂದು ನನಗೆ ಭಾಸವಾಗುತ್ತಿದೆ. ನೀನಾವ ದೇವತೆಯಾಗಿರುವಿ? ನೀನು ವಸು, ರುದ್ರ, ಮರುದ್ಗಣ ಇವರಲ್ಲಿ ಓರ್ವನಾಗಿರುವೆಯಾ? ಅಥವಾ ವಜ್ರಧಾರಿ ದೇವೇಂದ್ರನಾಗಿರುವಿಯಾ?

ಯಕ್ಷನು: ಭರತಶ್ರೇಷ್ಠ ಯುಧಿಷ್ಠಿರ ನಾನು ನಿನ್ನ ಜನ್ಮದಾತನಾದ ಧರ್ಮರಾಜನಾಗಿರುವೆನು. ನಿನ್ನನ್ನು ನೋಡಬೇಕೆಂಬ ಇಚ್ಛೆಯಿಂದ ಈ ರೂಪವನ್ನು ಧರಿಸಿ ಬಂದಿರುವೆನು. ನಿನ್ನ ಧರ್ಮನಿಷ್ಠೆ ಮಾದ್ರಿಯ ಮೇಲಿನ ಪ್ರೇಮವನ್ನು ನೋಡಿ ಪ್ರಸನ್ನನಾಗಿರುವ ಕಾರಣ ವರವನ್ನು ಯಾಚಿಸು."

ಯುಧಿಷ್ಠಿರ: ಭಗವನ್! ಬ್ರಾಹ್ಮಣ ಅರಣಿ ಮತ್ತು ಮಂಥನಗಳನ್ನು ಜಿಂಕೆಯು ಕೊಂಡುಹೋದುದರಿಂದ ಅವನ ಅಗ್ನಿಹೋತ್ರಕ್ಕೆ ಲೋಪ ಬಂದಂತಾಯಿತು. ಅವನನ್ನು ಆ ಬ್ರಾಹ್ಮಣನಿಗೆ ಅನುಗ್ರಹಿಸಬೇಕೆಂಬುದೇ ನಾನು ಯಾಚಿಸುವ ವರವು.

ಯಕ್ಷರೂಪ ಧರ್ಮರಾಜ: "ಕುಂತೀನಂದನ! ನಿನ್ನನ್ನು ಪರೀಕ್ಷಿಸುವುದಕ್ಕಾಗಿ ನಾನೇ ಮೃಗರೂಪದಿಂದ ಅಪಹರಿಸಿರುವೆನು. ಅವು ಈಗಲೇ ಆ ಬ್ರಾಹ್ಮಣನ ಬಳಿ ಸೇರಿದವು. ನಿನಗೆ ಭದ್ರವಾಗಲಿ. ಎರಡನೇ ವರವನ್ನು ಕೇಳು.

ಆಗ ಯುಧಿಷ್ಠಿರನು, ನಾವು ಹನ್ನೆರಡು ವರ್ಷ ವನವಾಸವನ್ನು ಮುಗಿಸಿದಂತಾಯಿತು. ಅಜ್ಞಾತವಾಸವು ಸಮೀಪಿಸುತ್ತಿದೆ. ನಾವು ಎಲ್ಲಿ ವಾಸಮಾಡಿಕೊಂಡಿದ್ದರೂ ಯಾರಿಗೂ ನಮ್ಮ ನಿಜತ್ವ ತಿಳಿಯದಂತೆ ವರವನ್ನು ಅನುಗ್ರಹಿಸು."

ಆಗ ಯಕ್ಷನು-ಭರತನಂದನ! ನೀವು ಅಜ್ಞಾತದ ಒಂದು ವರ್ಷಕಾಲವನ್ನು ವಿರಾಟನಗರದಲ್ಲಿ ಕಳೆಯಿರಿ. ಆಗ ನಿಮ್ಮನ್ನು ಯಾರೂ ತಿಳಿಯದಂತಾಗುವುದು. ನಿಮಗೆ ಇಷ್ಟವಾದ ರೂಪವನ್ನು ಧರಿಸುವ ಶಕ್ತಿಯು ಪ್ರಾಪ್ತವಾಗುವುದು. ಪುತ್ರಾ ಮೂರನೇ ವರವನ್ನು ಕೇಳು.

ಯುಧಿಷ್ಠಿರ: ಪಿತಾ, ಸನಾತನ ದೇವಾದಿದೇವ, ಈಗ ನಿನ್ನ ಸಾಕ್ಷಾತ್ ದರ್ಶನವಾಯಿತು. ನೀನು ವರಗಳನ್ನು ಕರುಣಿಸಿದಿ. ಅವನು ನಾನು ಬೇಡಿರುವೆನು. ಮೂರನೆಯದಾದ ಈ ವರವನ್ನು ಅನುಗ್ರಹಿಸು ಪರಮಪಿತಾ.

ಜಯೇಯಂ ಲೋಭಮೋಹೌ ಚ
ಕ್ರೋಧಂ ಚಾಹಂ ಸದಾ ವಿಭೋ।
ದಾನೇ ತಪಸಿ ಸತ್ಯೇ ಚ ಮನೋ ಮೇ
ಸತತಂ ಭವೇತ್ ॥ ೩೧೪-೨೪ ॥

ವಿಭೋ, ಲೋಭ, ಮೋಹ ಮತ್ತು ಕ್ರೋಧ ಇವು ಮೂರನ್ನು ಜಯಿಸುವಂತೆಯೂ, ದಾನ, ತಪ ಮತ್ತು ಸತ್ಯ ಇವು ನನ್ನಲ್ಲಿ ಸದಾ ಸರ್ವದಾ ನೆಲಸುವಂತೆಯೂ ಅನುಗ್ರಹಿಸು ಎಂದು ಬೇಡುತ್ತೇನೆ" ಎಂದು ಯಾಚಿಸಿದನು.

ಧರ್ಮರಾಜನು, 'ಪಾಂಡುಪುತ್ರ, ನೀನು ಸ್ವಯಂ ಧರ್ಮ ಸ್ವರೂಪನಾಗಿರುವಿ, ನೀನು ಯಾಚಿಸಿರುವ ಗುಣದಿಂದ ಸಂಪನ್ನನೇ ಆಗಿರುವಿ. ಆಗಲಿ. ನಿನ್ನಲ್ಲಿ ಈ ಗುಣಗಳು ಶಾಶ್ವತವಾಗಿ ನೆಲಸಲಿ" ಎಂದು ಭಗವಾನ ಧರ್ಮನು ಅಂತರ್ಧಾನನಾದನು. ಆ ಮೇಲೆ ಪಾಂಡವರು ತಮ್ಮ ಆಶ್ರಮಕ್ಕೆ ಹಿಂತಿರುಗಿದರು.

ಆ ಮೇಲೆ ಆ ಪಾಂಡವರು ಅಜ್ಞಾತವಾಸಕ್ಕೆ ಸಿದ್ಧರಾಗಿ, ತಮ್ಮನ್ನು ಅನುಸರಿಸಿ ಬಂದ ಬ್ರಾಹ್ಮಣರನ್ನು ಅಭಿವಂದಿಸಿ ದ್ರೌಪದಿಯೊಡನೆ ಹೊರಟರು.

"ವನವಾಸ ಸಂಪೂರ್ಣವು"

—

ಪ್ರಭಾತ

ಸಂಪುಟ: ೨೯. ಸಂಚಿಕೆ: ೧೩.   5—5—1963   Vol. XXIX. No. 13

ಪಾಶ್ಚಾತ್ಯರ ಸೇನಾಸಹಾಯ ಮತ್ತು ಕಾಶ್ಮೀರ

ಆರು ತಿಂಗಳುಗಳ ಹಿಂದೆ ಚೀನವು ಹಠಾತ್ತಾಗಿ ಭಾರತದ ಉತ್ತರ ಗಡಿಯಲ್ಲಿ ಆಕ್ರಮಣ ಮಾಡಿದಾಗ ಭಾರತವು ಕೇಳಿಕೊಂಡಂತೆ ಅಮೇರಿಕ, ಬ್ರಿಟನ್, ಕೆನಡಾ ಮತ್ತು ಆಸ್ಟ್ರೇಲಿಯಾಗಳು ಒಡನೆಯೇ ಸೇನಾ ಸಾಮಗ್ರಿಗಳನ್ನು ಒದಗಿಸಿ ಭಾರತಕ್ಕೆ ಸಹಾಯ ಮಾಡಿದವು. ಇವುಗಳಲ್ಲಿ ಅಮೇರಿಕ ಮತ್ತು ಬ್ರಿಟನ್‌ಗಳ ಸಹಾಯವು ಸಹಜವಾಗಿ ಅಧಿಕವೂ ಮುಖ್ಯವೂ ಆಗಿತ್ತು. ಈಗ ಗಡಿಯಲ್ಲಿ ಪ್ರತ್ಯಕ್ಷ ಹೋರಾಟವು ನಡೆಯುತ್ತಿಲ್ಲವೆಂಬುದು ನಿಜ. ಈ ಗಡಿ ವಿವಾದವನ್ನು ಚೀನ ಮತ್ತು ಭಾರತಗಳ ನಡುವೆ ನೇರ ಮಾತುಕತೆಗಳ ಮೂಲಕ ಬಗೆಹರಿಸಬೇಕೆಂದು ಚೀನವು ಬಾಯಿಮಾತಿನಿಂದ ಹೇಳುತ್ತಿದೆಯೆಂಬುದೂ ನಿಜ. ಆದರೆ ಅಂಥ ಮಾತುಕತೆಗಳನ್ನು ನಡೆಸಲು ಕೊಲೊಂಬೋ ರಾಷ್ಟ್ರಗಳು ಮಂಡಿಸಿದ್ದ ಸೂಚನೆಗಳನ್ನು ಭಾರತವು ಒಪ್ಪಿಕೊಂಡಿದ್ದರೂ, ಚೀನವು ಒಪ್ಪಿಕೊಂಡಿಲ್ಲ. ಆದುದರಿಂದ ಅಂಥ ಮಾತುಗಳು ನಡೆಯುವ ಲಕ್ಷಣಗಳು ತೋರಿಬರುವುದಿಲ್ಲ. ಬದಲಿಗೆ ಚೀನವು ಗಡಿಯಲ್ಲಿ ಯುದ್ಧಸಿದ್ಧತೆಗಳನ್ನ ಮಾಡುತ್ತಿದೆ; ಜತೆಯಲ್ಲಿ ಭಾರತಕ್ಕೆ ಬೆದರಿಕೆಗಳನ್ನೂ ಹಾಕುತ್ತಿದೆ. ಇಂಥ ಸ್ಥಿತಿಯಲ್ಲಿ ಚೀನವು ಭಾರತದ ಮೇಲೆ ಮತ್ತೆ ಆಕ್ರಮಣ ಮಾಡುವ ಭೀತಿಯು ಇದ್ದೇ ಇದೆ. ಅಂಥ ಆಕ್ರಮಣವಾದರೆ, ಅದನ್ನೆದುರಿಸಲು ಭಾರತಕ್ಕೆ ಮುಖ್ಯವಾಗಿ ಅಮೆರಿಕ ಮತ್ತು ಬ್ರಿಟನ್‌ಗಳ ವಿಶೇಷ ಸಹಾಯವು ಅತ್ಯಾವಶ್ಯಕವಾಗಿದೆ. ಇದನ್ನು ಆ ದೇಶಗಳು ಮನಗಂಡಿವೆ. ಅಂತೆಯೇ ಕಮ್ಯೂನಿಸ್ಟ್ ಚೀನದ ವಿಸ್ತರಣವನ್ನು ತಡೆಯುವ ಉದ್ದೇಶದಿಂದ ಆ ದೇಶಗಳು ಅಂಥ ಸಹಾಯವನ್ನು ಒದಗಿಸಲು ಒಪ್ಪಿಕೊಂಡಿವೆ. ಇದೆಲ್ಲದರ ಬಗ್ಗೆ ಭಾರತವು ಆ ದೇಶಗಳಿಗೆ ಆಭಾರಿಯಾಗಿರಬೇಕು; ಆಗಿದೆ.

ಅಮೆರಿಕ ಮತ್ತು ಬ್ರಿಟನುಗಳು ಭಾರತಕ್ಕೆ ಸೇನಾ ಸಹಾಯವನ್ನೊದಗಿಸಲು ಅಧಿಕೃತವಾಗಿ ಯಾವುದೇ ಶರ್ತವನ್ನು ಹಾಕಿಲ್ಲ. ಹಾಗಿದ್ದರೂ ಆ ದೇಶಗಳು ಅದಕ್ಕೆ ಕೆಲವೊಂದು ತೊಡಕುಗಳನ್ನು ಕಾಣುತ್ತಿವೆ. ಇವುಗಳಲ್ಲಿ ಪಾಕಿಸ್ತಾನದ ಆಕ್ಷೇಪವು ಮುಖ್ಯವಾಗಿದೆ. ಇದರಿಂದ, ಆರು ತಿಂಗಳುಗಳ ಹಿಂದೆ ಆ ದೇಶಗಳು ಸೇನಾಸಾಮಗ್ರಿಗಳನ್ನು ಕೊಡುವ ಸಂದರ್ಭದಲ್ಲಿ ಪಾಕಿಸ್ಥಾನದ ಸಮಾಧಾನದ ಬಗ್ಗೆ, ಚೀನದ ಆಕ್ರಮಣವನ್ನು ತಡೆಯುವುದಕ್ಕೋಸ್ಕರ ಕೊಡಲಾದ ಆ ಸಾಮಗ್ರಿಗಳನ್ನು ಬೇರೆ ಯಾವುದೇ ಉದ್ದೇಶಗಳಿಗೆ ಉಪಯೋಗಿಸಲಾಗುವುದಿಲ್ಲವೆಂಬ ಲಿಖಿತ ಆಶ್ವಾಸನೆಯನ್ನು ಭಾರತವು ಕೊಟ್ಟಿತು. ಆದರೆ ಪಾಕಿಸ್ಥಾನಕ್ಕೆ ಅದರಿಂದ ತೃಪ್ತಿಯಾಗಿಲ್ಲ. ಅದು ತನ್ನ ಆಕ್ಷೇಪವನ್ನು ತೀವ್ರವಾಗಿ ಒತ್ತಿಹೇಳುತ್ತಲೇ ಇದೆ ಮತ್ತು ಭಾರತಕ್ಕೆ ಅಂಥ ಸಹಾಯವನ್ನು ಆ ದೇಶಗಳು ಒದಗಿಸದಂತೆ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದೆ. ದೇಶ ವಿದೇಶಗಳಲ್ಲಿ ಭಾರತದ ವಿರುದ್ಧ ತೀವ್ರ ಅಪಪ್ರಚಾರವು ಅಂಥ ಪ್ರಯತ್ನಗಳಲ್ಲಿ ಒಂದಾಗಿದೆ; ಪಾಶ್ಚಾತ್ಯರೊಡನೆ ಸೇನಾ ಒಪ್ಪಂದಗಳಿಂದ ತಾನು ಹೊರಬರುವೆನೆಂಬ ಬೆದರಿಕೆಯು ಇನ್ನೊಂದಾಗಿದೆ.

ಭಾರತ ಮತ್ತು ಪಾಕಿಸ್ಥಾನಗಳೊಳಗಿನ ಕಾಶ್ಮೀರದ ಸಂಬಂಧದ ವಿವಾದವು ತೀರ್ಮಾನವಾಗದೆ ಉಳಿದಿರುವುದರಿಂದ, ಭಾರತಕ್ಕೆ ತನ್ನ ಪೂರ್ಣ ಬಲವನ್ನು ಚೀನದ ವಿರುದ್ಧ ಉಪಯೋಗಿಸಲು ಸಾಧ್ಯವಾಗುವುದಿಲ್ಲ. ಈ ವಿವಾದವು ಬಗೆಹರಿಸಲ್ಪಟ್ಟರೆ, ಅರ್ಥಾತ್ ಕಾಶ್ಮೀರದ ಸಂಬಂಧದಲ್ಲಿ ಪಾಕಿಸ್ಥಾನದ ಬೆದರಿಕೆಯು ಇಲ್ಲವಾದರೆ, ಭಾರತವು ತನ್ನ ಪೂರ್ಣ ಶಕ್ತಿಯನ್ನು ಚೀನದ ಆಕ್ರಮಣ ವಿರುದ್ಧ ಉಪಯೋಗಿಸಲು ಸಾಧ್ಯವಾಗುವುದು. ಈ ವಾದವನ್ನೂ ಭಾರತ ಮತ್ತು ಪಾಕಿಸ್ಥಾನಗಳ ಐಕ್ಯ ಯತ್ನಗಳ ಹೊರತು ಚೀನದ ಆಕ್ರಮಣವನ್ನು ತಡೆಯಲು ಸಾಧ್ಯವಾಗದು ಎಂಬ ವಾದವನ್ನೂ, ಅಮೆರಿಕ ಮತ್ತು ಬ್ರಿಟನ್‌ಗಳು ಕಾಶ್ಮೀರ ವಿವಾದವನ್ನು ಬಗೆಹರಿಸಲು ನೇರ ಮಾತುಕತೆಗಳನ್ನು ನಡೆಸಲು ಎರಡೂ ದೇಶಗಳನ್ನು ಪ್ರೇರೇಪಿಸಿದವು. ಎಲ್ಲ ವಿವಾದಗಳನ್ನು ಮುಖ್ಯವಾಗಿ ಪಾಕಿಸ್ಥಾನದೊಡನೆ ಶಾಂತಿಯುತ ಮಾತುಕತೆಗಳಿಂದಲೇ ಬಗೆಹರಿಸಬೇಕೆಂದಿರುವ ಭಾರತವು ಈ ಸಲಹೆಯನ್ನು ಒಡನೆಯೇ ಒಪ್ಪಿಕೊಂಡು, ಮಾತುಕತೆಗಳು ಪ್ರಾರಂಭವಾದವು. ಮಾತುಕತೆಗಳ ಐದನೆಯ ಸುತ್ತು ಕಳೆದ ತಿಂಗಳಲ್ಲಿ ಕರಾಚಿಯಲ್ಲಿ ನಡೆದು. ಆರನೆಯ ಸುತ್ತು ಈ ತಿಂಗಳಲ್ಲಿ ನವದೆಹಲಿಯಲ್ಲಿ ಜರಗಲಿದೆ.

ಈ ಮಾತುಕತೆಗಳ ಪರಿಣಾಮವಾಗಲೀ ವಿವರಗಳಾಗಲೀ ಅಧಿಕೃತವಾಗಿ ತಿಳಿದುಬಂದಿಲ್ಲ. ಸಂಸದದ ಸದಸ್ಯರು ಇದರ ಕುರಿತು ಪ್ರಸ್ತಾಪಿಸಿದಾಗ ನಮ್ಮ ಪ್ರಧಾನ ಮಂತ್ರಿಯವರು, ಈ ವಾರ ವಿದೇಶ ವಿಚಾರಗಳ ಸಂಬಂಧದಲ್ಲಿ ತಾನು ಕೊಡಲಿರುವ ಹೇಳಿಕೆಯಲ್ಲಿ ಈ ವಿಷಯವನ್ನೂ ಪ್ರಸ್ತಾಪಿಸಲಾಗುವುದೆಂದು ಹೇಳಿದ್ದಾರೆ. ಕಳೆದ ವಾರ ಕರಾಚಿಯಲ್ಲಿ ನಡೆದ "ಸೆಂಟೋ" ರಾಷ್ಟ್ರಗಳ ಸಭೆಯಲ್ಲಿ ಭಾಗವಹಿಸಲು ಬಂದಿದ್ದ ಅಮೆರಿಕದ ರಾಜ್ಯಾಂಗ ಖಾತೆಯ ಮಂತ್ರಿ ಮಿ| ಡೀನ್ ರಸ್ಕ್ ಮತ್ತು ಬ್ರಿಟನಿನ ಕಾಮನ್ವೆಲ್ತ್ ಸಂಬಂಧಗಳ ಖಾತೆಯ ಮಂತ್ರಿ ಮಿ| ಡಂಕನ್ ಸ್ಯಾಂಡ್ಸ್‌ರು ಕಳೆದ ಗುರುವಾರ ನವದೆಹಲಿಗೆ ಬಂದಿದ್ದುದರಿಂದ, ಅವರೊಡನೆ ವಿಚಾರ ವಿನಿಮಯ ಮಾಡಿದ ನಂತರವೇ ಈ ವಿಷಯದಲ್ಲಿ ಹೇಳಿಕೆಯನ್ನೀಯುವುದು ಉತ್ತಮವೆಂಬ ಕಾರಣವನ್ನು ಪ್ರಧಾನ ಮಂತ್ರಿಯವರು ಮುಂದಿಟ್ಟಿದ್ದಾರೆ. ಆದುದರಿಂದ ಈ ವಿಷಯದಲ್ಲಿ ಏನನ್ನಾದರೂ ಹೇಳುವುದು ಪ್ರಧಾನ ಮಂತ್ರಿಯವರ ಹೇಳಿಕೆಯ ನಂತರವೇ ಯುಕ್ತವಾಗುವುದು. ಹಾಗಿದ್ದರೂ ಪತ್ರಿಕಾ ವರದಿಗಳಿಂದ ತಿಳಿದುಬಂದಿರುವಂತೆ, ಈ ಮಾತುಕತೆಗಳಲ್ಲಿ ಏನೂ ಪ್ರಗತಿಯಾಗಿಲ್ಲ; ಸಮಸ್ಯೆಯು ಇದ್ದ ಹಾಗೇ ಉಳಿದಿದೆ; ಮಾತ್ರವಲ್ಲದೆ ಈ ತಿಂಗಳಲ್ಲಿ ನವದೆಹಲಿಯಲ್ಲಾಗಲಿರುವ ಮಾತುಕತೆಗಳಿಂದಲೂ ಪ್ರಯೋಜನವಾಗುವ ಸಂಭವವಿಲ್ಲ. ಏಕೆಂದರೆ ಪಾಕಿಸ್ತಾನವು, ಭಾರತದ ಕಷ್ಟಗಳ ಪೂರ್ಣ ಉಪಯೋಗವನ್ನು ಮಾಡಿ ತನ್ನ ನಿಲುಮೆಯನ್ನು ಇನ್ನೂ ತೀವ್ರಗೊಳಿಸುತ್ತಲೇ ಇದೆ. ಅದಕ್ಕೆ ಇಡೀ ಕಾಶ್ಮೀರವು ಸಿಗದ ಹೊರತು ತೃಪ್ತಿಯಿಲ್ಲ. ಹೆಚ್ಚೆಂದರೆ ಜಮ್ಮು ಪ್ರದೇಶದ ಒಂದೂವರೆ ಜಿಲ್ಲೆಗಳಷ್ಟನ್ನು ಮಾತ್ರ ಭಾರತಕ್ಕೆ "ಬಿಟ್ಟುಕೊಡಲು" ಅದು ಸಿದ್ಧವಿದೆ. ಇದಕ್ಕೆ ಭಾರತವು ಸಮ್ಮತಿಸದು.

ಹೀಗೆ ಭಾರತ ಮತ್ತು ಪಾಕಿಸ್ತಾನಗಳೊಳಗಿನ ಮಾತುಕತೆಗಳಿಂದ ಪ್ರಯೋಜನವಿಲ್ಲವೆಂದಾದ ನಂತರ ಅಮೆರಿಕ ಮತ್ತು ಬ್ರಿಟನುಗಳು ಈ ಸಮಸ್ಯೆಯ ತೀರ್ಮಾನಕ್ಕೆ ತಮ್ಮದೇ ಒಂದು ಪರಿಹಾರವನ್ನು ಮುಂದಿಡುವರೆಂದು ಹೇಳಲಾಗಿದೆ. ಈ ಪಾಶ್ಚಾತ್ಯರ ಸೂಚನೆ ಏನೇ ಇರಲಿ, ಅದು ಪಾಕಿಸ್ತಾನಕ್ಕೇ ಹೆಚ್ಚು ಪ್ರಯೋಜನಕಾರಿಯಾಗುವುದೆಂಬುದರಲ್ಲಿ ಅನುಮಾನವಿಲ್ಲ. ಏಕೆಂದರೆ ಪಾಕಿಸ್ಥಾನಕ್ಕೆ ತೃಪ್ತಿಪಡಿಸಿ ಮನವೊಪ್ಪಿಸುವುದೇ ಅವರ ಮುಖ್ಯ ಉದ್ದೇಶವಾಗಿದೆ. ಭಾರತಕ್ಕೆ ಎಷ್ಟೇ ಅನ್ಯಾಯವಾಗಲಿ, ಅದು ತನ್ನ ಈ ಕಷ್ಟದ ಸಮಯದಲ್ಲಿ ಸೇನಾ ಸಹಾಯವು ಬೇಕಾಗಿದ್ದರೆ ತಮ್ಮ ಸೂಚನೆಯನ್ನು ಅಂಗೀಕರಿಸದೆ ಅದಕ್ಕೆ ಬೇರೆ ಉಪಾಯವೇ ಇಲ್ಲವೆಂದು ಅವುಗಳು ಭಾವಿಸುವುದು ದುರದೃಷ್ಟಕರವಾಗುವುದು

ಒಂದು ವೇಳೆ ಭಾರತ ಮತ್ತು ಪಾಕಿಸ್ಥಾನಗಳೊಳಗಿನ ವಿವಾದವು ಯಾವುದೇ ರೀತಿಯಲ್ಲಿ ಬಗೆಹರಿಸಲ್ಪಟ್ಟರೂ, ಅದರಿಂದ ಚೀನದ ಆಕ್ರಮಣವನ್ನು ಎದುರಿಸಲು ಸ್ವಲ್ಪವೂ ಸಹಾಯವಾಗದು ಏಕೆಂದರೆ ಪಾಕಿಸ್ಥಾನವು ಚೀನದೊಡನೆ ಈಗಾಗಲೇ ಮಾಡಿಕೊಂಡಿರುವ ಒಪ್ಪಂದದ ಕಾರಣದಿಂದ ಅದು ಚೀನಕ್ಕೆ ವಿರುದ್ಧ ಭಾರತಕ್ಕೆ ಕಿಂಚಿತ್ತಾದರೂ ಸಹಾಯ ಮಾಡಲಾರದು. ವಸ್ತುಸ್ಥಿತಿಯೇನೆಂದರೆ, ಪಾಕಿಸ್ಥಾನದ ಅಧ್ಯಕ್ಷರು ಕಳೆದ ತಿಂಗಳಾಂತ್ಯದಲ್ಲಿ, ಭಾರತವೇ ಚೀನದ ವಿರುದ್ಧ ಹೋರಾಟವನ್ನು ಪ್ರಾರಂಭಿಸಿತೆಂದು ಹೇಳಿದ್ದಾರೆ. ಆದುದರಿಂದ ಕಾಶ್ಮೀರ ವಿವಾದದ ತೀರ್ಮಾನವು, ಚೀನದ ಆಕ್ರಮಣವನ್ನೆದುರಿಸಲು ಅನಿವಾರ್ಯವಾಗಿದೆಯೆಂದು ಭಾವಿಸುವ ಅಮೆರಿಕ ಮತ್ತು ಬ್ರಿಟನುಗಳು, ಭಾರತಕ್ಕೆ ಸೇನಾ ಸಹಾಯವನ್ನು ನೀಡುವುದಕ್ಕೆ ಕಾಶ್ಮೀರದ ವಿವಾದದ ತೀರ್ಮಾನವು ಒಂದು ಪೂರ್ವಭಾವೀ ಶರ್ತವೆಂಬ ನಿಲುಮೆಯನ್ನು ಬಿಟ್ಟುಬಿಡಬೇಕು. ಅದೇ ಸಮಯದಲ್ಲಿ ಭಾರತವು ಸಹ, ಅಮೆರಿಕ ಮತ್ತು ಬ್ರಿಟನುಗಳಿಂದ ಸೇನಾ ಸಹಾಯವನ್ನು ಪಡೆಯುವುದಕ್ಕೋಸ್ಕರ, ಕಾಶ್ಮೀರದ ವಿವಾದದ ಸಂಬಂಧದಲ್ಲಿ ನ್ಯಾಯ ಮತ್ತು ನೀತಿಗಳಿಗೆ ವಿರುದ್ಧವಾದ ಯಾವುದೇ ಪರಿಹಾರವನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲವೆಂಬುದನ್ನು ಆ ದೇಶಗಳಿಗೆ ಸ್ಪಷ್ಟಪಡಿಸಬೇಕು. ಇಂಥ ನಿಲುಮೆಯಿಂದ ಪಾಶ್ಚಾತ್ಯರಿಂದ ಸಿಗಬಹುದಾದ ಸೇನಾ ಸಹಾಯಕ್ಕೆ ಕಡಿತವಾಗುವ ಸಂಭವವಿಲ್ಲವಾದರೂ, ಸಾಧ್ಯತೆಯಿದೆಯೆಂಬುದು ನಿಜ. ಆದರೆ ನಮ್ಮ ಹಕ್ಕನ್ನು, ಸ್ವಾತಂತ್ರ್ಯವನ್ನು ಬಿಟ್ಟುಕೊಡುತ್ತ ಹೋದರೆ, ಯಾವದೇ ಸೇನಾಸಹಾಯದಿಂದ ಪ್ರಯೋಜನವಾದರೂ ಏನು? ಪಾಶ್ಚಾತ್ಯರಿಂದ ಸೇನಾ ಸಹಾಯವು ಸಿಕ್ಕದೆ ಹೋದರೆ ಅದರ ಬಗ್ಗೆ ಬೇರೆ ಉಪಾಯಗಳನ್ನು ಹುಡುಕಬೇಕು ಮತ್ತು ಕಷ್ಟಪಟ್ಟು ದುಡಿಯಬೇಕು, ಹೊರತು ಬಲಕ್ಕೆ, ಅನ್ಯಾಯಕ್ಕೆ ತಲೆಬಾಗುವುದು ಒಳಿತಲ್ಲ.

....

ಯೆಡನೀರಿನಲ್ಲಿ ಶ್ರೀ ದ್ವಾರಕಾ ಜಗದ್ಗುರುಳವರ ಅಧ್ಯಕ್ಷತೆಯಲ್ಲಿ ಶ್ರೀ ಶಂಕರ ಜಯಂತಿ

ಮೂರು ದಿನಗಳ ಮಹೋತ್ಸವ!

ಮುಂಬಯಿ ಮುಖ್ಯಮಂತ್ರಿಗಳ ಸಂದರ್ಶನ!

"ಪ್ರಭಾತ" ಜಗದ್ಗುರು ಅಂಕದ ಸಮರ್ಪಣೆ!

ಶ್ರೀ ಶಂಕರ ಜಯಂತಿಯು, ಕಾಸರಗೋಡು ತಾಲೂಕಿನ ಯೆಡನೀರು ಶ್ರೀ ಮಠದಲ್ಲಿ ಎಂದಿಗಿಂತ ಹೆಚ್ಚಿನ ವಿಜೃಂಭಣೆಯಿಂದ ಜರಗಿತು. ಊರ ಪರವೂರ ಹಲವು ಮಹನೀಯರು ಭಾಗವಹಿಸಿದ್ದರು. ಶ್ರೀ ದ್ವಾರಕಾ ಶಾರದಾ ಪೀಠದ ಶ್ರೀ ಜಗದ್ಗುರು ಶ್ರೀ ಅಭಿನವ ಸಚ್ಚಿದಾನಂದ ತೀರ್ಥ ಸ್ವಾಮಿಗಳವರು ಆಹ್ವಾನಿತರಾಗಿ, ಮೂರು ದಿನಗಳ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಶಂಕರ ಜಯಂತಿಯು (ತಾ. 28), ಮುಂಬಯಿಯ ಮುಖ್ಯ ಮಂತ್ರಿ ಶ್ರೀ ಕನ್ನಂವಾರರವರು ಆಗಮಿಸಿ, ಜಯಂತಿಯ ಉದ್ಘಾಟನಾ ಭಾಷಣವನ್ನು ಮಾಡುತ್ತ, ಸಾವಿರ ವರುಷಗಳಿಗೂ ಹಿಂದೆ ಇದೇ ಕೇರಳದಲ್ಲಿ ಜನಿಸಿ, ತಮ್ಮ ಅಲ್ಪ ಆಯುಸ್ಸಿನೊಳಗೆ ಭಾರತವನ್ನು ಸಂಚರಿಸಿ ಅದ್ವೈತ ಮತವನ್ನು ಪ್ರಚಾರಗೊಳಿಸಿ, ದೇಶದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿ, ದೇಶದ ಜನರಲ್ಲಿ ಒಗ್ಗಟನ್ನು ಸಾಧಿಸಿದುದನ್ನು ವಿವರಿಸಿ ಶ್ರೀ ದ್ವಾರಕಾ ಪೀಠಾಧೀಶರು ಆದೇಶಪಥದಲ್ಲಿ—ಧರ್ಮ ಪ್ರಚಾರವನ್ನೂ ಶಿಕ್ಷಣಾಲಯ ಮುಂತಾದುವುಗಳ ಮೂಲಕ ಜನತಾ ಸೇವೆಯನ್ನೂ ಮಾಡುತ್ತಿರುವುದನ್ನು ಸ್ಮರಿಸಿ, ಈ ಉತ್ಸವಕ್ಕೆ ಬಂದು ಭಾಗವಹಿಸಲು ಅನು ದೊರೆತುದಕ್ಕಾಗಿ ಸಂತೋಷ ವ್ಯಕ್ತಪಡಿಸಿದರು. ಶ್ರೀ| ಕೆ. ಬಾಲಕೃಷ್ಣರಾವ್, —ಅವರು ಮುಖ್ಯಮಂತ್ರಿಗಳನ್ನು ಸ್ವಾಗತಿಸಿ, ಭಾಷಣವಿತ್ತರು.

"ಪ್ರಭಾತ" ಸಂಪಾದಕರು, ಈ ಸಂದರ್ಭದಲ್ಲಿ ತಯಾರಿಸಿದ 'ಪ್ರಭಾತದ ಜಗದ್ಗುರು ಅಂಕವನ್ನು ಶ್ರೀ ಜಗದ್ಗುರುಗಳವರಿಗೆ ಅರ್ಪಿಸಿದರು. ಶ್ರೀ ಜಗದ್ಗುರುಗಳವರು ಜಗದ್ಗುರು ಅಂಕವನ್ನು ಉದ್ಘಾಟಿಸುತ್ತ 'ಪ್ರಭಾತ್' ಸಂಪಾದಕರು ಕಳೆದೆಂಟು ವರ್ಷಗಳಿಂದ ಶಂಕರ ಜಯಂತಿಯಂದು ಜಗದ್ಗುರು ಅಂಕವನ್ನು ಪ್ರಕಟಿಸಿ ಧಾರ್ಮಿಕ ರಂಗದಲ್ಲಿ ಸೇವೆ ಸಲ್ಲಿಸುತ್ತಿರುವುದನ್ನು ಶ್ಲಾಘಿಸಿ ಅಖಿಲ ಭಾರತದಲ್ಲೇ ಇಂಥ ಅಂಕವು ಇದೊಂದೇ ಎನ್ನುತ್ತ, ಆಶೀರ್ವದಿಸಿದರು.

ಶ್ರೀ ಶಂಕರಾಚಾರ್ಯರ ಜೀವನ, ತತ್ತ್ವೋಪದೇಶ, ಮತಪ್ರಸಾರ, ಭಾಷಾ ಸೌಂದರ್ಯ ಮುಂತಾದುವನ್ನು ಕುರಿತು ಅನೇಕ ವಿದ್ವಾಂಸರು ಸಭೆಯಲ್ಲಿ ಭಾಷಣ ಮಾಡಿದರು ಮಂಗಳೂರಿನ ಶ್ರೀ ಕೋ. ಶಂಕರನಾರಾಯಣ ಕಾರಂತ, ಎಡ್ವೊಕೇಟ್ ಅವರು ಭಾಷಣ ಮಾಡುತ್ತ, ಇಂದಿನ ಶಿಕ್ಷಣವೂ, ಜೀವನ ಪದ್ಧತಿಯೂ ಧಾರ್ಮಿಕತತ್ವವನ್ನು ಬಿಟ್ಟು ವಿಮುಖನಾಗಿ ಸಾಗುತ್ತಿರುವುದನ್ನು ಪ್ರಸ್ತಾಪಿಸಿ ಮನುಷ್ಯನು ಧರ್ಮವನ್ನು ಬಿಟ್ಟು ಯಾವ ರಂಗದಲ್ಲೂ ಪೂರ್ಣ ವಿಜಯಿಯಾಗಲಾರನೆಂದೂ, ಜೀವನಸಾಫಲ್ಯವು ನಿರಾಡಂಬರವಾದ ಜೀವನ—ಸತ್ಯಸಂಧತೆ—ಮುಂತಾದುವುಗಳಿಂದಲೇ ಆಗುವುದೆಂದೂ ಹೇಳಿ, ಶ್ರೀ ಮದಾಚಾರ್ಯರು ಶಿಥಿಲವಾಗಿ ಹೋಗುತ್ತಿದ್ದ ಧರ್ಮವನ್ನೂ—ಅಧೋಗತಿಗೆ ಇಳಿಯುತ್ತಿದ ಜನತೆಯನ್ನೂ ಉದ್ಧರಿಸದೇ ಇದ್ದರೆ ಭಾರತವೆಂಬ ಹೆಸರೇ ಅಳಿದುಹೋಗುತ್ತಿತ್ತೆಂದೂ, ಪ್ರತಿಯೊಬ್ಬನೂ ಅವರ ಉಚ್ಚತಮ ಬೋಧನೆಯನ್ನು ಮನನ ಮಾಡಿ ಸಚ್ಚರಿತರಾಗಿ ನಡೆಕೊಳ್ಳಬೇಕೆಂದೂ ಹೇಳಿದರು.

ಶ್ರೀಮದೆಡನೀರು ಮಠಾಧೀಶರಾದ ಶ್ರೀ ಕೇಶವಾನಂದ ಭಾರತಿ ಶ್ರೀ ಪಾದಂಗಳವರೂ, ಬಾಳೆಕುದುರು ಶ್ರೀ ಮಠದ ಶ್ರೀಶಂಕರಾಶ್ರಮ ಸ್ವಾಮಿಗಳವರೂ ಧರ್ಮಪ್ರವಚನ ನಡೆಸಿದರು. ಶ್ರೀದ್ವಾರಕಾ ಪೀಠಾಧೀಶರು ವಿದ್ವತ್ಪೂರ್ಣವಾಗಿ ಶ್ರೀ ಮದಾಚಾರ್ಯರ ಜೀವನ—ತತ್ತ್ವೋಪದೇಶಗಳ ಕುರಿತು—ಸರ್ವರಿಗೂ ತಿಳಿಯುವಂತೆ ಅತ್ಯಂತ ಲಲಿತವಾಗಿ ಉಪನ್ಯಾಸವಿತ್ತರು.

ರಾತ್ರಿ ಮಹಾಪೂಜೆ ನಾಟಕಾದಿ ವಿನೋದಾವಳಿಗಳು ಇದ್ದುವು.

ಶ್ರೀ ದ್ವಾರಕಾ ಪೀಠಾಧೀಶರು ಮರುದಿನ ವಿಟ್ಲಕ್ಕೆ ತೆರಳಿ, ಅಲ್ಲಿಂದ ಯೆಡನೀರು ಶ್ರೀ ಮಠಕ್ಕೆ ಹಿಂದಿರುಗಿ, ಮಂಗಳವಾರ ಮುಳುಬಾಗಿಲು ಮಠಕ್ಕೆ ಮುಂದರಿದರು.

ಮೂರು ಸ್ವಾಮಿಗಳು ವಿರಾಜಮಾನರಾಗಿರುವ ಮಹಾಸಭೆಯು ಜನರ ಕಣ್ಮನಗಳನ್ನು ಸೆಳೆಸಿತು. ಹೀಗೆ, ಶ್ರೀ ಜಗದ್ಗುರುಗಳವರೂ, ಎರಡು ಮಠಗಳ ಸ್ವಾಮಿಗಳವರೂ ಸೇರಿ ನಡೆದ ಶಂಕರ ಜಯಂತ್ಯುತ್ಸವವು ಇಲ್ಲಿ ಇದೇ ಮೊದಲನೆಯದೆನ್ನಬಹುದು.

——

ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ಮಂಗಳೂರಲ್ಲಿ

ಕಾಂಞಂಗಾಡಿನ ಸಮಾರಂಭದಲ್ಲಿ ಭಾಗವಹಿಸಿ ತಾ. 29ರಂದು ಬೆಳಿಗ್ಗೆ ಮಂಗಳೂರಿಗೆ ಆಗಮಿಸಿದ ಮಹಾರಾಷ್ಟ್ರ ಮುಖ್ಯಮಂತ್ರಿ ಶ್ರೀ| ಕನ್ನಮ್ವಾರ್‌ರವರನ್ನು ರೈಲ್ವೇ ನಿಲ್ದಾಣದಲ್ಲಿ ಮಂಗಳೂರಿನ ಪ್ರಮುಖ ಅಧಿಕಾರಿಗಳು ಹಾಗೂ ಪುರಪ್ರಮುಖರು ಸ್ವಾಗತಿಸಿದರು. ಶ್ರೀ| ಕನ್ನಮ್ವಾರ್‌ರವರ ಗೌರವಾರ್ಥ ಸ್ಥಳೀಯ ಕೆನರಾ ವರ್ಕ್‌ಶೋಪಿನ ಟೆಕ್ನಿಕಲ್ ಡೈರೆಕ್ಟರ್ ಶ್ರೀ| ವಿ. ಎಸ್. ಕುಡ್ವರು ಮಧ್ಯಾಹ್ನ ಒಂದು ಭೋಜನ ಕೂಟವನ್ನೇರ್ಪಡಿಸಿದ್ದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಶ್ರೀ| ಸಿ. ಜೆ. ಪದ್ಮನಾಭನವರು ಜಿಲ್ಲೆಯ ಬೇರೆ ಬೇರೆ ಅಭಿವೃದ್ಧಿ ಕಾರ್ಯಗಳನ್ನು ಮುಖ್ಯ ಮಂತ್ರಿಗಳಿಗೆ ವಿವರಿಸಿ ಹೇಳಿದರು. ಮಂಗಳೂರಿನ ಬಗ್ಗೆ ಅಭಿಪ್ರಾಯ ಕೇಳಿದಾಗ ಶ್ರೀ| ಕನ್ನಮ್ವಾರ್‌ರವರು, 'ಮಂಗಳೂರು ರಾಷ್ಟ್ರದ ಕೆಲವೇ ಬೃಹತ್ ನಗರಗಳಲ್ಲಿ ಒಂದಾಗಿ ಪರಿವರ್ತನೆಗೊಳ್ಳುವ ಕಾಲ ಬಹುದೂರವಿಲ್ಲ. ಯೋಜಿತ ಬಂದರು, ಎಲ್ಯೂಮಿನಿಯಂ ಕಾರ್ಖಾನೆ ಗೊಬ್ಬರ ಕಾರ್ಖಾನೆ ಇವೆಲ್ಲಾ ಬೃಹತ್ ಯೋಜನೆಗಳು ಕಾಣಮುಂದಿರುವಾಗ ಮಂಗಳೂರಿನ ಭವಿಷ್ಯ ಉಜ್ವಲವಾಗಿದೆ ಎಂದು ಪ್ರತ್ಯೇಕ ಹೇಳಬೇಕಾಗಿಲ್ಲ' ಎಂದರು.

ಮಧ್ಯಾಹ್ನ ವಿಮಾನ ಮೂಲಕ ಮುಂಬಯಿಗೆ ತೆರಳುವ ಮುನ್ನ ಅವರು ನಗರದ ಹೇಂಡಿಕ್ರಾಫ್ಟ್ ಎಂಪೋರಿಯಮ್ಮಿಗೆ ಸಂದರ್ಶನವಿತ್ತಿದ್ದರು. ಕದ್ರಿ ಇನ್ಸ್‌ಪೆಕ್ಷನ್ ಬಂಗಲೆಯ ಮಠಾರದಲ್ಲಿ ಜಿಲ್ಲಾ ಪೋಲಿಸಧಿಕಾರಿ ಶ್ರೀ| ಅಬ್ರಹಾಂ ವರ್ಗೀಸ್‌ರ ನೇತೃತ್ವದಲ್ಲಿ ಮುಖ್ಯಮಂತ್ರಿಗಳಿಗೆ ರಿಸರ್ವ್ ಪೋಲೀಸ್ ದಳದ ವಿಭಾಗವೊಂದು ಗೌರವರಕ್ಷೆ ಅರ್ಪಿಸಿತ್ತು.

ಮುಂಬಯಿಯಿಂದ ವಿಮಾನ ಮೂಲಕ ತಾ. 28ರಂದು ಬಜ್ಪೆಗೆ ಆಗಮಿಸಿದ ಮಹಾರಾಷ್ಟ್ರ ಮುಖ್ಯಮಂತ್ರಿಯವರು ಕಾಂಞಂಗಾಡಿಗೆ ತೆರಳುವ ಮುನ್ನ ಸುರತ್ಕಲ್ ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕೊಲೆಜಿಗೆ ಸಂದರ್ಶನವಿತ್ತಿದ್ದರು. ಕೊಲೆಜಿನಲ್ಲಿ ಕೊಲೆಜ್ ಮ್ಯಾಗಜಿನ್ 'ಕರ್ನಾಟಕೀಯ'ವನ್ನು ಮುಖ್ಯಮಂತ್ರಿಯವರು ಉದ್ಘಾಟಿಸಿದರು. ಕೊಲೆಜಿನ ಪ್ರಿನ್ಸಿಪಾಲ್ ಡಾ| ಎ. ಎಸ್. ಅಡ್ಕೆಯವರು ಮುಖ್ಯಮಂತ್ರಿಗಳಿಗೆ ಕೊಲೇಜಿನ ಬೇರೆ ಬೇರೆ ವಿಭಾಗಗಳನ್ನು ತೋರಿಸಿದಾಗ, ಮಂತ್ರಿಯವರು ಕೊಲೆಜಿನ ಪ್ರಗತಿಯ ಬಗ್ಗೆ ತೃಪ್ತಿ ಸೂಚಿಸಿದರು.

——

ಹತ್ತು ಸಾವಿರ ರೂಪಾಯಿ ಅಪಹಾರ

ಮಂಗಳೂರು ಕೆನರಾ ಬೇಂಕ್ ಒಂದು ಶಾಖೆಯಲ್ಲಿ, ತಾ. 4ನೇ ಶನಿವಾರ ಬೆಳಿಗ್ಗೆ ಮೆ| ಉಳ್ಳಾಲ ನಾರಾಯಣ ಮಲ್ಯ ಎಂಡ್ ಸನ್ಸ್ ಸಂಸ್ಥೆಯಿಂದ ಮಟಾಯಿಸಲು ಆ ಸಂಸ್ಥೆಯ ನೌಕರನೊಬ್ಬನು ರೂ. 50,000ದ ಚೆಕ್ ತಂದು, ಮಟಾಯಿಸಿ ನೂರು ರೂಪಾಯಿಗಳ ನೂರು ನೋಟುಗಳ ಐದು ಕಟ್ಟುಗಳನ್ನು ಪಡೆದು ಹೊರ ಬೆಂಚಿನಲ್ಲಿ ಕುಳಿತು ಪುನಃ ಎಣಿಕೆ ಮಾಡುತಿದ್ದಾಗ ಅಪರಿಚಿತನಾರೋ ಬಂದು ನೋಡಿ ನಿಮ್ಮದೊಂದು ನೋಟು ಕೆಳಗೆ ಬಿದ್ದಿದೆ ಎನ್ನಲು, ಆ ನೌಕರನು ಕೆಳಗೆ ಇಣಿಕಿದಾಗ ಅಪರಿಚಿತನು ಹತ್ತು ಸಾವಿರ ರೂಪಾಯಿಗಳ ಒಂದು ಕಟ್ಟು ಹಿಡಿದು ಪರಾರಿಯಾದನೆಂದೂ ಈ ವಿಷಯವಾಗಿ ಪೋಲೀಸರಿಗೆ ದೂರು ಕೊಟ್ಟಿರುವುದಾಗಿಯೂ ತಿಳಿದು ಬರುತ್ತದೆ. ಶನಿವಾರ ರಾತ್ರೆ ತನಕ ಕಳ್ಳನ ಪತ್ತೆಯಾಗಿಲ್ಲ.

ಇದೇ ರೀತಿ, ಕೆಲಕಾಲದ ಹಿಂದೆ ಸ್ಥಳೀಯ ಇನ್ನೊಂದು ಬೇಂಕಿನಲ್ಲಿ ಒಬ್ಬನು ಹಣ ಅಪಹರಿಸಿಬಿಟ್ಟುದು ನೆನಪಿಗೆ ಬರುತ್ತಿದೆ.

ಚೆಕ್ ಮಟಾಯಿಸಿ ಎಣಿಕೆ ಮಾಡುತಿದ್ದ (ಶ್ರೀ ಗಣಪತಿ ಕಾಮತ್ ಎಂದು ಹೆಸರು) ನೌಕರರ ಹೇಳಿಕೆಯಂತೆ ಆ ಅಪರಿಚಿತ ವ್ಯಕ್ತಿಯ ವಯಸ್ಸು ಸುಮಾರು 35 ಇರಬಹುದೆಂದೂ, ಕಪ್ಪು ವರ್ಣದವನೆಂದೂ ಕೇಳಿ ಬರುತ್ತದೆ.

——

ಭಾರತ ಸೇವಕ ದಳದ ದಳಪತಿಗಳ ಶಿಬಿರದ ಮುಕ್ತಾಯ ಸಮಾರಂಭ

ಜಿಲ್ಲಾ ಭಾರತ ಸೇವಕ ಸಮಾಜದ ವತಿಯಿಂದ ನಡೆಸಲ್ಪಟ್ಟ ಭಾರತ ಸೇವಕ ದಳದ ದಳಪತಿಗಳ ತರಬೇತಿ ಶಿಬಿರದ ಮುಕ್ತಾಯ ಸಮಾರಂಭವು ತಾ. 1ರಲ್ಲಿ ಭಾರತ ಸೇವಕ ಸಮಾಜದ ಅಧ್ಯಕ್ಷರಾದ ಶ್ರೀ ಮಣೇಲ್ ಶ್ರೀನಿವಾಸ ನಾಯ್ಕ್, ಎಮ್. ಎಲ್. ಎ., ಅವರ ಅಧ್ಯಕ್ಷತೆಯಲ್ಲಿ ಉರ್ವ ಕೆನರಾ ಹೈಸ್ಕೂಲಿನಲ್ಲಿ ಜರಗಿತು. ಗೌರವ ರಕ್ಷೆ, ಪಥಚಲನಗಳಾದ ನಂತರ ಪ್ರಾರ್ಥನೆಯೊಂದಿಗೆ ಸಭಾ ಕಾರ್ಯಕ್ರಮವು ಆರಂಭವಾಯಿತು. ಶ್ರೀ| ಯು. ರಾಜಾರಾಮ ಮಲ್ಯ ಬಿ ಎ. ಬಿ. ಎಲ್. ಅವರು ಸ್ವಾಗತ ಭಾಷಣ ಮಾಡಿದರು. ಶಿಬಿರಾಧಿಕಾರಿಯಿಂದ ವರದಿ ವಾಚನ, ದಳಪತಿಗಳಿಂದ ಪ್ರತಿಜ್ಞಾಸ್ವೀಕಾರಗಳು ನಡೆದು ದಳಪತಿಗಳಿಗೆ ಸರ್ಟಿಫಿಕೇಟುಗಳನ್ನೂ ಬಹುಮಾನಗಳನ್ನೂ ಡಾ| ಅಡ್ಕೆಯವರ ಹಸ್ತದಿಂದ ವಿತರಣೆ ಮಾಡಲಾಯಿತು ಡಾ| ಅಡ್ಕೆಯವರು ದಳಪತಿಗಳನ್ನು ಬೀಳ್ಕೊಡುವ ಭಾಷಣ ಮಾಡುತ್ತ ಶಿಸ್ತು ಸೇವಾಧರ್ಮಗಳನ್ನು ವಿವರಿಸಿ ದಳಪತಿಗಳಿಗೆ ಹಿತವಚನ ಹೇಳಿದರು. ಶ್ರೀ| ಮಣೇಲ್ ಶ್ರೀನಿವಾಸ ನಾಯ್ಕರವರು ಭಾಷಣ ಮಾಡುತ್ತ ಭಾರತ ಸೇವಕ ಸಮಾಜದ ಉದ್ದೇಶಗಳು ಸೇವಕ ದಳದ ಮಹತ್ವ, ಗ್ರಾಮಾಂತರಗಳಲ್ಲೂ ಅವರು ನೀಡುವ ಸಹಾಯ ಸೇವೆಗಳು ಮುಂತಾದುವನ್ನು ವಿವರಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದ ನಂತರ ಧನ್ಯವಾದಾರ್ಪಣೆಯಾಗಿ ಸಮಾರಂಭವು ಕೊನೆಗೊಂಡಿತು.

——

ಸ್ವೀಕಾರ

ಅಭಿನಂದನ ಗ್ರಂಥ: ಕರ್ನಾಟಕ ಪ್ರಾದೇಶಿಕ ಆಯುರ್ವೇದ ಸಮ್ಮೇಲನದ ಇಪ್ಪತ್ತನಾಲ್ಕನೆ ಅಧಿವೇಶನ (ಮಂಗಳೂರು) ಈ ಸಂದರ್ಭದಲ್ಲಿ ಪ್ರಕಟಿಸಿದ "ಅಭಿನಂದನ" ಗ್ರಂಥವು ನಮ್ಮ ಕೈ ಸೇರಿದೆ. ವಿಮರ್ಶೆ ಮುಂದಿನ ವಾರ.

——

ತುಳುಸಂಧಿಯ ಕತೆ: ೫೦.

ಕಲ್ಪನಾ ತರಂಗ

[ತಾ. 21—4—63ನೇ ಸಂಚಿಕೆಯಿಂದ ಮುಂದುವರಿದುದು]

"ಜೋಮ ರಂಗಮೆ" ಎಂಬುದಾಗಿ ಹೆಣ್ಣು ಮಗುವಿಗೆ ನಾಮಕರಣವನ್ನು ಮಾಡಿದರು

ಜೋಮ ರಂಗಮೆ ಬೆಂಕಿ ನೀನಂತೆ ತೇಜೋ ಪ್ರಜ್ವಲತೆಯಿಂದ ದಿನದಿಂದ ದಿನಕ್ಕೆ ಪ್ರವರ್ಧಮಾನಳಾಗಿ ಬಳೆದಳು. ಕೌಮಾರ್ಯವನ್ನು ದಾಟಿ ತಾರುಣ್ಯದ ಹಂತಕ್ಕೆ ಕಾಲಿಕ್ಕಿದಳು.

ಮನೋಹರವಾದ ಮುಖಕಮಲ! ವಿಶಾಲವಾದ ಅಕ್ಷಿಗಳು! ಮಾಟವಾದ ಎದೆ! ವಸಂತಋತುವಿನಲ್ಲಿ ವಿಕಸಿತವಾಗುವ ಪುಷ್ಪೌಘದಂತೆ ಆ ಕಾಲದಲ್ಲಿ ಜೋಮರಂಗಮೆಯ ಸೌಂದರ್ಯ ಪ್ರಭೆಯು ಯೌವನದ ಸಮಾಗಮಕ್ಕಾಗಿ ಉಕ್ಕಿಬರುವಂತಿತ್ತು!

ಬೈಲಸೂಡವನಿಗೆ ಬಾಲಬೈರನನೆಂಬ ಸೋದರಳಿಯನಿದ್ದನು. ಬಾಲಬೈರನನ್ನೂ, ಜೋಮ ರಂಗಮೆಯೂ ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದರು, ಅವರು ಅನನ್ಯ ಪ್ರಣಯಿಗಳಾಗಿದ್ದರು. ಅವರ ಪ್ರೇಮ ಪ್ರಸಂಗಗಳು ಮಾತ್ರ ಬೈಲಸೂಡವನ ದೃಷ್ಟಿಪಥಕ್ಕೆ ಬಿದ್ದಿರಲಿಲ್ಲ.

ಒಂದು ದಿನ ಬೈಲಸೂಡವ ತನ್ನ ಮಗಳು— ಜೋಮ ರಂಗಮೆ— ಇರುವ ಏಳು ಮಾಳಿಗೆಯ ಮೇಲಂತಸ್ತಿಗೆ ಹೋದನು. ಆ ಸಮಯದಲ್ಲಿ ಜೋಮ ರಂಗಮೆ ತಾನು ತೊಟ್ಟುಕೊಂಡಿದ್ದ ರವಕೆಯನ್ನು ಬಿಚ್ಚಿ ಮಂಚದ ಮೇಲೆ ಒಗೆದಿದ್ದಳು. ಅಲ್ಲಿಗೆ ಪ್ರವೇಶಿಸಿದ ಬೈಲಸೂಡವನ ದೃಷ್ಟಿ ತಟ್ಟನೇ ಮಂಚದ ಮೇಲಿರುವ ರವಕೆಯ ಕಡೆಗೆ ಹೋಯಿತು.

ಸ್ತನಗಳ ಅಚ್ಚೊತ್ತಿದ ಭಾಗಗಳು ರವಕೆಯ ಇಕ್ಕಡೆಗಳಲ್ಲಿ ತುಂಬಾಯ ಮೊಗ್ಗೆಯಂತೆ ಉಬ್ಬರಿಸಿಕೊಂಡಿತ್ತು.

ಆ ದೃಶ್ಯವು ಬೈಲಸೂಡವನ ಚಿತ್ತ ವಿಭ್ರಮವನ್ನುಂಟುಮಾಡಿತು. ಒಡನೇ ಆ ಮರುಳನು ಕಾಮಾವಿಷ್ಟನಾಗಿ ಹೋದನು.

ಉಪ್ಪರಿಗೆಯನ್ನು ಸರಸರನೇ ಇಳಿದು ಕೆಳಗೆ ಬಂದನು.

ಅನೈತಿಕ ಪಾಪಚರಿತ ವರ್ತನೆ! ಅತಿಪ್ರೇಮದ ಅಂತರ್ದಾಹದಿಂದ ಅವನ ಮನಸ್ಸು ಒಂದೇ ಸವನೆ ಉದ್ಭ್ರಮಿಸತೊಡಗಿತು. ಆತ ವಿವೇಕವನ್ನು ಕಳೆದುಕೊಂಡನು. ತನ್ನ ಬಯಕೆಯನ್ನು ಪೂರಯಿಸಲು ಆ ಮೂರ್ಖನೂ, ಕಾಮಾಂಧನೂ ಆದ ಬೈಲಸೂಡವ ಸಾವಕಾಶಮಾಡದೆ ನಿರ್ಧಾರವೊಂದನ್ನು ಕೈಕೊಂಡನು.

ದೇಶವಿದೇಶಗಳ ಅರಸರುಗಳಿಗೆ ಓಲೆಗಳನ್ನು ಬರೆದು—

"ನನ್ನ ವರ್ಗದಲ್ಲಿ ನಾನು ನೆಟ್ಟ ಕಾಯಿಫಲ್ಯಗಳನ್ನು ನಾನು ತಿನ್ನಬಹುದೇ?"— ಎಂಬ ಪ್ರಶ್ನೆಯನ್ನು ಹಾಕಿದನು

"ನಮ್ಮ ನಮ್ಮ ವರ್ಗದಲ್ಲಿ ನಾವು ಬೆಳೆಸಿದ ಕಾಯಿಫಲ್ಯಗಳನ್ನು ಹೊರಗೆ ಕೊಡದೆ ನಮಗೆ ಯಥೇಷ್ಟ ತಿನ್ನಬಹುದು"— ಎಂದು ಅರಸರು ಪ್ರತ್ಯುತ್ತರವನ್ನು ಕೊಟ್ಟರು.

ಬೈಲಸೂಡವನಿಗೆ ಅಷ್ಟೇ ಬೇಕಿತ್ತು

ಅರಮನೆಯ ಮುಂದೆ ದೊಡ್ಡ ಚಪ್ಪರವನ್ನು ಹಾಕಿಸಿದನು. ತನಗೆ ಮದುವೆಯೆಂದು ಜ್ಞಾತಿ ಬಾಂಧವ ಇಷ್ಟಮಿತ್ರರಿಗೆ ಹೇಳಿಕೆ ಹೊರಡಿಸಿದನು. ಚಿನ್ನಾಭರಣಗಳನ್ನು ಮಾಡಿಸಿದನು. ಅಮೂಲ್ಯವಾದ ಸೀರೆ, ರವಕೆ ಮುಂತಾದ ವಸ್ತ್ರಭೂಷಣಗಳನ್ನು ಕೊಂಡಿಟ್ಟನು.

ತಂದೆಯು ಮಾಡುತ್ತಿರುವ ವೈಭವಪೂರ್ಣ ಸನ್ನಾಹ ಏರ್ಪಾಡುಗಳನ್ನು ಕಂಡು ಜೋಮ ರಂಗಮೆ ತಂದೆಯನ್ನು ಕೇಳಿದಳು:

"ಅಪ್ಪಾ, ಇದೇಕೆಲ್ಲ ಗದ್ದಲವು?"

ಬೈಲಸೂಡವ ಉತ್ತರಿಸಿದನು:

"ನಿನಗೂ ನನಗೂ ಮದುವೆ, ಮಗಳೇ"

ತಂದೆಯ ಮಾತಿಗೆ ನಿಷ್ಕಪಟಭಾವದ ಜೋಮ ರಂಗಮೆ ಬೇರೆಯೇ ಅರ್ಥಕಟ್ಟಿದಳು. ಮಗಳಿಗೊಂದು ಮದು[illegible] ಮಾಡಿದ ಮೇಲೆ, ವಿಧುರನಾಗಿ[illegible]ನ್ನ ತಂದೆ ಕೂಡ ಎರಡನೇ ಮದುವೆಯೊಂದನ್ನು ಮಾಡಿಕೊಳ್ಳುವ ಹಂಚಿಕೆಯನ್ನು ತೊಟ್ಟಿರಬಹುದೆಂಬುದಾಗಿ ಅವಳು ಊಹಿಸಿದಳು.

"ತಂದೆಯು ನನ್ನನ್ನು ಯಾರಿಗೆ ಮದುವೆ ಮಾಡಿಕೊಡುತ್ತಾರೆ? ನನ್ನ ಪ್ರಿಯಕರನಾದ ಬಾಲಬೈರನ ನನಗೆ ವರನಾಗಿ ದೊರಕಬಹುದೇ?"— ಹೀಗೊಂದು ಸಂದಿಗ್ಧ ವಿಚಾರಧಾರೆ. ತನ್ಮಧ್ಯೆ ಜೋಮ ರಂಗಮೆಯ ಚಿತ್ತಪಟಲದಲ್ಲಿ ಮೂಡಿ ಅವಳನ್ನು ಗೊಂದಲಕ್ಕೀಡುಮಾಡದೆ ಇರಲಿಲ್ಲ.

ಆದರೆ ಅವಳ ಊಹನೆ ಹಾಗೂ ಹಂಬಲಗಳು ವ್ಯರ್ಥವಾಗಿಕೊಳ್ಳುವ ಪ್ರಸಂಗವು ಕ್ಷಿಪ್ರದಲ್ಲೇ ಸನ್ನಿಹಿತವಾಯಿತು.

ಮರುದಿನ ಮುಂಜಾನೆ ಅವಳು ಬಾವಿಕಟ್ಟೆಗೆ ಮುಖಮಜ್ಜನಕ್ಕೆ ಹೋದಳು. ಆವಾಗ್ಗೆ, ನೆರೆಹೊರೆಯ ಹೆಂಗಸರು ಒಂದೆಡೆ ಗುಂಪಾಗಿ ನಿಂತುಕೊಂಡು ಬೈಲಸೂಡವನ ಅನ್ಯಾಯಕರವೂ ಅಸೀತಿಕರವೂ ಆದ ವರ್ತನದ ಕುರಿತು ಪರಸ್ಪರ ಕಟುವಾಗಿ ವಿಮರ್ಶಿಸತೊಡಗಿದರು.

"ಮಗಳನ್ನು ತಂದೆಯು ಮದುವೆಯಾಗುವ ಕ್ರಮ ಲೋಕದಲ್ಲಿ ಉಂಟೇ?"— ಎಂದು ಹಂಗಿಸಿದರು.

ಹೆಂಗಸರ ಮಾತನ್ನು ಜೋಮ ರಂಗಮೆ ಕಿವಿಗೊಳವೆ ಮಾಡಿ ಆಲಿಸಿದಳು. ಅವಳು ಒಮ್ಮೆಲೇ ಗರಬಡಿದಂತಾಗಿ ಬಿಟ್ಟಳು. ತಂದೆಯ ದುರುದ್ದೇಶಪೂರಿತ ನಡವಳಿಕೆ ಅವಳಿಗೀಗ ಮನದಟ್ಟಾಗಿಕೊಂಡಿತು. ದಿಗ್‌ಭ್ರಾಂತಳಾಗಿ ದಡದಡನೇ ಹೋಗುತ್ತ ತನ್ನ ಏಳುಮಾಳಿಗೆಯ ಮೇಲಂತಸ್ತನ್ನೇರಿದಳು. ಹಾಸಿಗೆಯ ಮೇಲೆ ಉರುಳಿಕೊಂಡು ಕಂಗಳಿಂದ ಕಣ್ಣೀರ ಪ್ರವಾಹವನ್ನು ಸುರಿಸುತ್ತ ಬಿಕ್ಕಿ ಬಿಕ್ಕಿ ರೋದಿಸಿದಳು. ವಿವಾಹವನ್ನು ತಪ್ಪಿಸುವ ಮಾರ್ಗವನ್ನು ಯೋಚಿಸಿದಳು. ಕಟ್ಟಕಡೆಗೆ ಅವಳ ಮಿದುಳಿಗೆ ಒಂದು ಉಪಾಯವು ಮಿಂಚಿಕೊಂಡಿತು.

ತಂದೆಯನ್ನು ತನ್ನ ಬಳಿಗೆ ಕರೆದು ಅವನ ಮುಂದೆ ಈ ರೀತಿ ಬಿಸಗೊಂಡಳು:

"ಅಪ್ಪಾ! ಏಳುಮಾಳಿಗೆಯ ಮೇಲಂತಸ್ತಿನಲ್ಲಿ ಕೂತು ನೋಡುವುದಕ್ಕೆ ನನಗ್ಯಾವ ಅಂದ ಚಂದ ಉಂಟು? ಎರಡು ಮಣ ಕಂಚಿನಿಂದ ನನಗೊಂದು "ಸಾನದಿಗೆ" (ನೀಲಾಂಜನ)ಯನ್ನು ತಯಾರಿಸಿ ಕೊಡಿರಿ."

ಬೈಲಸೂಡವ ಕೂಡಲೇ ಕಂಚುಗಾರರಿಗೆ ನಿರೂಪಕೊಟ್ಟನು. ಕಂಚುಗಾರರು ಎರಕಹೊಯ್ದು ಸುಂದರವಾದ ದೊಡ್ಡ ನೀಲಾಂಜನವನ್ನು ರಚಿಸಿಕೊಟ್ಟರು. ಬೈಲಸೂಡವ ಅದನ್ನು ಮಗಳಿಗೆ ಒಪ್ಪಿಸಿದನು.

ನಾಳೆ ಮದುವೆಯಾದರೆ ಇಂದು ಹೀಗೆ ನಡೆಯಿತು:

ಜೋಮ ರಂಗಮೆ ತನ್ನ ಅಂತರಂಗದ ಪರಿಚಾರಿಕೆಯೊಬ್ಬಳ ಮುಖಾಂತರ ಹೊರಗಿನಿಂದ ನಾಲ್ವರು ದಾಂಡಿಗರನ್ನು ಕರತರಿಸಿಕೊಂಡಳು. ಥೈಲಿ ಹಣ ಕೊಟ್ಟು ಮೊದಲಾಗಿ ಅವರ ಕೈ ಬೆಚ್ಚಗೆಮಾಡಿದನು. ಬಳಿಕ ಅವರಿಗೆ ಈ ರೀತಿ ಹೇಳಿದಳು:

"ಏಳುಮಾಳಿಗೆಯ ಮೇಲಂತಸ್ತಿನ ಮೇಲೆ ನೀಲಾಂಜನವೊಂದಿರುತ್ತದೆ. ಅದನ್ನು ಹಲಸಿನ ಪೆಟ್ಟಿಗೆಯೊಳಗೆ ಇಡಿರಿ. ಮಧ್ಯಾಹ್ನ ಸಮಯದಲ್ಲಿ ನೀಲಾಂಜನವಿರುವ ಪೆಟ್ಟಿಗೆಯನ್ನು ಹೊತ್ತುಕೊಂಡು ಹೋಗಿ ಸಮುದ್ರಕ್ಕೆ ಎಸೆದು ಬನ್ನಿರಿ"

ಜೋಮ ರಂಗಮೆ ಅದೇ ಪರಿಚಾರಿಕೆಯ ಕೈಗೆ ಓಲೆಯೊಂದನ್ನು ಕೊಟ್ಟು, ಅದನ್ನು ತನ್ನ ಪ್ರಣಯಿಯಾದ ಬಾಲಬೈರನನಿಗೆ ತಲಪಿಸಿದಳು.

ನೀಲಿ ಪತ್ತಲವನ್ನು ಉಟ್ಟಳು; ಜರಿಯ ಕುಪ್ಪಸವನ್ನು ತೊಟ್ಟಳು. ಬಗೆಬಗೆಯ ಚಿನ್ನಾಭರಣಗಳನ್ನು ಧರಿಸಿದಳು. ತುರುಬಿಗೆ ಮಲ್ಲಿಗೆಯ ಹೂದಂಡೆ ಮುಡಿದಳು. ಮದುಮಗಳ ಶೃಂಗಾರವಾದಳು. ತರುವಾಯ ನೀಲಾಂಜನದೊಳಗೆ ನುಸುಳಿಕೊಂಡು ಅದರ ಬಾಯನ್ನು ಮುಚ್ಚಿದಳು. ಜೋಮ ರಂಗಮೆ ನೀಲಾಂಜನದೊಳಗೆ ಅಡಗಿ ಕೂತುದನ್ನು ಯಾರೂ ಅರಿಯರು!

ಮಧ್ಯಾಹ್ನ—ಸಕಾಲದಲ್ಲಿ—ಆ ನಾಲ್ವರು ದಾಂಡಿಗರು ಬಂದು ನೀಲಾಂಜನವನ್ನು ಹಲಸಿನ ಪೆಟ್ಟಿಗೆಯೊಳಗ ಇಟ್ಟರು. ನೀಲಾಂಜನ ಸಮೇತ ಪೆಟ್ಟಿಗೆಯನ್ನು ಹೊತ್ತುಕೊಂಡು ನೆಟ್ಟಗೆ ಹೋಗಿ ಅದನ್ನು ಸಮುದ್ರಕ್ಕೆ ಎಸೆದರು!

ಬಾಲಬೈರನ ತನ್ನ ಪ್ರೇಯಸಿಯು ಓಲೆಯಲ್ಲಿ ಬರೆದ ನಿರ್ದೇಶನದನ್ವಯ ಕಾರ್ಯಪ್ರವರ್ತನಾಗಿದ್ದನು. ಮಡಿವಾಳನೊಬ್ಬನ ಛದ್ಮವೇಷವನ್ನು ತೊಟ್ಟು ಸಮುದ್ರಕಿನಾರೆಯಲ್ಲಿ ಬಟ್ಟೆ ಒಗೆಯುತ್ತಿದ್ದವನಂತೆ ನಟಿಸುತ್ತ ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತಿದ್ದನು. ಕೊಂಚ ಹೊತ್ತಿನಲ್ಲಿ ಪೆಟ್ಟಿಗೆಯು ತನ್ನ ಕಡೆಗೆ ತೇಲಿಕೊಂಡು ಬರುವುದು ದೃಗ್ಗೋಚರಿಸಿತು. ಅದನ್ನು ಹಿಡಿದು ದಂಡೆಯ ಮೇಲಕ್ಕೆ ಎಳೆದುಕೊಂಡು ತಂದನು.

ನೀಲಾಂಜನದ ಉದರದೊಳಗೆ ಅರ್ಧ ಮೂರ್ಛಾವಸ್ಥೆಯಲ್ಲಿರುವ ಜೋಮ ರಂಗಮೆಯನ್ನು ಬಾಲಬೈರನ ಹೊರತೆಗೆದು ಉಸುಬಿನ ಮೇಲೆ ಮಲಗಿಸಿದನು. ಅವಳಿಗೆ ತಕ್ಕ ಶೈತ್ಯೋಪಚಾರವನ್ನು ಮಾಡಿದನು. ತುಸು ನಿಮಿಷಗಳು ಕಳೆದ ಮೇಲೆ ಜೋಮ ರಂಗಮೆ ಚೇತರಿಸಿ ಎದ್ದು ಕೂತಳು. ಮತ್ತೆ ಕಾಲಹರಣವನ್ನು ಮಾಡದೆ ಇಬ್ಬರೂ ಆ ಸ್ಥಳವನ್ನು ತ್ಯಜಿಸಿ ಎತ್ತಲೋ ಕಣ್ಮರೆಯಾದರು!

ಜೋಮ ರಂಗಮೆ ಮತ್ತು ಬಾಲಬೈರನರು ತಮ್ಮ ಜೀವನದಲ್ಲಿ ಬಂದೊದಗಿದ ವಿಪತ್ತನ್ನು ದಾಂಟಿ ಪಾರಾದರು. ಅನುಗುಣವಾಗಿ ಒಂದಾನೊಂದು ಪರನಾಡನ್ನು ಸೇರಿದರು. ಸುರಕ್ಷಿತವಾದ ನೆಲೆವೀಡನು ವಿರಚಿಸಿಕೊಂಡರು. ಪ್ರಣಯಿಗಳು ಸಹಜೀವನದೊಂದಿಗೆ ಆದರ್ಶ ಸತಿಪತಿಗಳಾದರು!

ಎಂ. ನಾರಾಯಣ,
ಮಂಗಳೂರು.

ಮೊದಲನೇ ವಜ್ರ ದೊರೆತುದು ಭಾರತದಲ್ಲಿ!
ಆದರೆ,
ಆಮ್‌ಸ್ಟರ್‌ಡಾಂ ನಗರವು "ವಜ್ರನಗರ"ವೆನಿಸಿದೆ.

ವಜ್ರಗಳನ್ನು ಕತ್ತರಿಸಲು ವಜ್ರವೇ ಸರಿಯಾದ ಸಾಧನ ಎಂದು ಹೇಳುವಂತೆಯೇ ವಜ್ರಗಳನ್ನು ಕತ್ತರಿಸಲು ಆಮ್‌ಸ್ಟರ್‌ಡಾಂ ನಗರವೇ ಸರಿಯಾದ ಸ್ಥಳವೆಂದೂ ಹೇಳಬಹುದು. ವಜ್ರಗಳನ್ನು ಸರಿಯಾಗಿ ಕತ್ತರಿಸಿ, ಎಲ್ಲರ ಕಣ್ಣುಗಳನ್ನೂ ಕುಕ್ಕುವಂತೆ ಮಾಡುವ ಕಲೆಯು ಇಲ್ಲಿ ಅನೇಕ ಶತಮಾನಗಳಿಂದ ಬೆಳೆದುಬಂದಿದೆ. ಅಂತೆಯೇ, ಈ ನಗರಕ್ಕೆ "ವಜ್ರನಗರ"ವೆಂಬ ಹೆಸರುಬಂದಿದೆ

ವಜ್ರವನ್ನು ಕತ್ತರಿಸುದೊಂದು ಕಲೆ. ಇದಕ್ಕೆ ಅತಿ ಹೆಚ್ಚಿನ ಕೌಶಲವಿರಬೇಕು. ಕಲ್ಲುಗಳಲ್ಲೆಲ್ಲಾ ವಜ್ರವು ಎಷ್ಟೊಂದು ಅನರ್ಘ್ಯವೋ ಅಷ್ಟೇ ಗಟ್ಟಿಯೂ ಹೌದು! ಅದಕ್ಕೆ ಅತಿ ಹೆಚ್ಚಿನ ಹೊಳಪು ಇರುವುದು ಮಾತ್ರವಲ್ಲದೆ, ಅದು ನಾಶವಾಗುವುದಿಲ್ಲ. ಕಳೆದ 3000 ವರ್ಷಗಳಿಂದಲೂ ಅದರ ಸ್ಥಾನವು ಅದ್ವಿತೀಯವಾಗಿದೆ. ಇದನ್ನು ಪಡೆಯುವುದಕ್ಕಾಗಿ ನಡೆದ ಕೊಲೆಗಳೂ, ಕಾದಾಟಗಳೂ ಅಸಂಖ್ಯಾತ! ಇಷ್ಟಾದರೂ ಅದನ್ನು ನೋಡಿ ಆನಂದಿಸಿ ಧರಿಸುವುದಕ್ಕಿಂತ ಹೆಚ್ಚಿನ ವಿಷಯಗಳು ಬಹುಮಂದಿಗೆ ತಿಳಿಯದು.

ಮೊಟ್ಟಮೊದಲನೆಯ ವಜ್ರ ದೊರತದ್ದು ಭಾರತದಲ್ಲಿ, ಅದೂ ಮೂವತ್ತು ಶತಮಾನಗಳ ಹಿಂದೆ. ಆದರೆ, ಆಮ್‌ಸ್ಟರ್‌ಡ್ಯಾಂನಲ್ಲಿ ವಜ್ರವನ್ನು ಕತ್ತರಿಸುವ ಕಲೆಯು ಆರಂಭವಾದದ್ದು 1586ರಲ್ಲಿ. ಅಂದಿನಿಂದ ಜಗತ್ತಿನ ಬೇರಾವ ದೇಶವೂ ಡಚ್ಚರನ್ನು ಈ ಕಲೆಯಲ್ಲಿ ಸೋಲಿಸಿಲ್ಲ. ಅವರ ಕಲಾಸಿದ್ಧಿಯನ್ನರಿತೇ ಆಫ್ರಿಕದ ಹಾಗೂ ಇಂಡೀಸಿನ ವಜ್ರಗಳನ್ನೆಲ್ಲಾ 17 ಹಾಗೂ 18ನೇ ಶತಮಾನಗಳಲ್ಲಿ ಅಲ್ಲಿಗೇ ಕಳಿಸಲಾಗುತ್ತಿತ್ತು.

ಆದಿಯಲ್ಲಿ ಭಾರತದಿಂದ ಬರುತ್ತಿದ್ದ ವಜ್ರಗಳು ಮಧ್ಯಪ್ರಾಚ್ಯದ ಮೂಲಕ ಬರುತ್ತಿದ್ದವು. ಪೋರ್ಚುಗೀಸರು ಭಾರತದಿಂದ ಯೂರೋಪಿಗೆ ಬರಲು ಸಮುದ್ರ ಮಾರ್ಗವನ್ನು ಕಂಡುಹಿಡಿದ ಮೇಲೆ, ವಜ್ರಗಳೆಲ್ಲಾ ಪೋರ್ಚುಗಲ್ಲಿನ ರಾಜಧಾನಿಯಾದ ಲಿಸ್ಬನ್ನಿನ ಹಾದಿ ಹಿಡಿದವು. ಮುಂದೆ ಸ್ಪೇನ್ ಹಾಗೂ ಪೋರ್ಚುಗಲ್ ಪತನವಾದಾಗ, ವಜ್ರದ ವ್ಯಾಪಾರಿಗಳ ನಡುವೆ ಕದನವಾಗಿ ಪೋರ್ಚುಗಲ್‌ಗಳೆಲ್ಲಾ ಸ್ವತಂತ್ರವಾಗಿದ್ದ ಆಮ್‌ಸ್ಟರ್‌ಡಾಂನ ಹಾದಿ ಹಿಡಿದರು. 14ನೇ ಲೂಯಿಯ ಒಂದು ಕರಾರಿನ ಪ್ರಕಾರ ಫ್ರಾನ್ಸಿನಲ್ಲಿದ್ದ 75 ವಜ್ರ ನಿಷ್ಣಾತ ಫ್ರೆಂಚರನ್ನೂ ಆಮ್‌ಸ್ಟರ್‌ಡ್ಯಾಂಗೆ ರವಾನಿಸಿಬಿಟ್ಟ. ಆದರೆ, ಆಮ್‌ಸ್ಟರ್‌ಡ್ಯಾಂನ ವಜ್ರ ಕಲೆಗೆ ನಿಜವಾದ ಕಾಂತಿಯು ಬಂದದ್ದು 1870ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ವಜ್ರಗಳ ಗಣಿಗಳನ್ನು ಕಂಡುಹಿಡಿದಾಗ. ಕೇವಲ ಹದಿನೆಂಟು ವಯಸ್ಸಿನ ಸೆಸಿಲ್ ಜಾನ್‌ರೋಡ್ಸ್ ಎಂಬ ಡಚ್ಚ್ ಯುವಕನು ವಜ್ರಸಂಬಂಧವಾದ ವ್ಯಾಪಾರಕ್ಕಾಗಿಯೇ ದಕ್ಷಿಣ ಆಫ್ರಿಕದಲ್ಲಿ "ಡೀ ಬೀರ್ಸ್ ಕಂಪೆನಿ" ಎಂಬ ಸಂಸ್ಥೆಯೊಂದನ್ನು ಆರಂಭಿಸಿದ.

ಜಗತ್ತಿನ ಒಟ್ಟು ಉತ್ಪನ್ನದಲ್ಲಿ 96% ರಷ್ಟು ವಜ್ರಗಳು ದಕ್ಷಿಣ ಆಫ್ರಿಕದ ಕಾಂಗೋ, ಅಂಗೋಲಾಗಳ ಗಣಿಗಳಲ್ಲಿಯೇ ದೊರಕುವುವು.

ಎರಡನೆಯ ಮಹಾಯುದ್ಧದ ಕಾಲದಲ್ಲಿ ಶತ್ರುಧಾಳಿಗೆ ಗುರಿಯಾದ ದೇಶಗಳಲ್ಲಿ ನೆದರ್‌ಲೇಂಡ್ಸ್ ಸಹಾ ಒಂದು. ವಜ್ರಪರಿಣತರಲ್ಲಿ ಅನೇಕರು ಸತ್ತೋ, ಓಡಿಹೋಗಿಯೋ, ಕೇವಲ 500 ಕ್ರಿಯಾಶಾಲಿಗಳು ಮಾತ್ರ ಉಳಿದುಕೊಂಡಿದ್ದರು. ಸುದೈವವಶಾತ್, ವಜ್ರಕೈಗಾರಿಕಾ ಕೇಂದ್ರಗಳಿಗೆ ಹಾನಿ ತಗಲಿರಲಿಲ್ಲ. ಯುದ್ಧಾನಂತರದಲ್ಲಿ, ಅಲ್ಲಿನ 1400 ಕೇಂದ್ರಗಳಲ್ಲಿ 12,000 ಕ್ಯಾರೆಟ್ ವಜ್ರಗಳಿದ್ದವು. ಅವುಗಳ ಕಾರ್ಯ ಇನ್ನೂ ಅಪೂರ್ಣವಾಗಿಯೇ ಇದ್ದುದರಿಂದ ಮತ್ತೆ ಡಚ್ಚರು ದೃಢಮನಸ್ಸಿನಿಂದ ಕಾರ್ಯವನ್ನಾರಂಭಿಸಿದರು.

ಈ ದೃಢಮನೋರಥಕ್ಕೆ ತಕ್ಕಂತಹ ಫಲವೂ ದೊರಕಿತು. 1958ರಲ್ಲಿ ಆಮ್‌ಸ್ಟರ್‌ಡ್ಯಾಂನ ವಜ್ರ ಕೈಗಾರಿಕೆಯ ಆದಾಯವು 28,000,000 ಡಾಲರ್‌ಗಳಿದ್ದದ್ದು, 1960ರಲ್ಲಿ ಆ ಸಂಖ್ಯೆಯು 40,588,000 ಗಳಷ್ಟಾಗಿದೆ. ದಿನೇ ದಿನೇ ಗಿರಾಕಿಗಳು ಏರುತ್ತಲೇ ನಡೆದಿದ್ದು, ವಜ್ರ ವ್ಯಾಪಾರದಲ್ಲಿ ಆಮ್‌ಸ್ಟರ್‌ಡ್ಯಾಂನೊಂದಿಗೆ ಸಂಪರ್ಕ ಹೊಂದದ ದೇಶವೇ ಜಗತ್ತಿನಲ್ಲಿಲ್ಲ. ಜರ್ಮನಿ, ಫ್ರಾನ್ಸ್, ಮಧ್ಯಪ್ರಾಚ್ಯ, ಇಂಗ್ಲೆಂಡ್, ಸ್ವಿಜರ್‌ಲೇಂಡ್ ಮೊದಲಾದುವುಗಳೆಲ್ಲಾ ಆಮ್‌ಸ್ಟರ್‌ಡ್ಯಾಂನ ಖಾಯಂ ಗಿರಾಕಿಗಳು. ಆದರೆ, ಇಲ್ಲಿನ ವಜ್ರಗಳಲ್ಲಿ ಸೇಕಡಾ ಬಹು ಹೆಚ್ಚಿನ ಭಾಗವು ಅಮೆರಿಕಾ ಸಂಯುಕ್ತ ರಾಷ್ಟ್ರಗಳಿಗೆ ರಫ್ತಾಗುತ್ತಿದೆ.

ಜಗತ್ತಿನ ಅತ್ಯಂತ ಹಿರಿಯದರಿಂದ ಹಿಡಿದು ಅತ್ಯಂತ ಕಿರಿಯ ವರೆಗಿನ ವಜ್ರಗಳು ಇಲ್ಲಿನ ತಜ್ಞರ ಕೈಚಳಕದಲ್ಲಿ ರೂಪುಗೊಂಡಿವೆ. ಅತ್ಯಂತ ಕಿರಿಯದೊಂದು ವಜ್ರ! ಅದೆಷ್ಟು ಪುಟ್ಟದೆಂದರೆ, ಅದನ್ನು ಮುಗಿಸಲು ಮೂರು ತಿಂಗಳಾದವು, ಮತ್ತು ಅದು ಹಿಡಿತ ತಪ್ಪಿ ಜಾರಿಕೊಂಡಾಗ, ಅದನ್ನು ಹುಡುಕಲು ಅತ್ಯಂತ ಶಕ್ತಿಯುತವಾದ ಸೂಕ್ಷ್ಮದರ್ಶಕವನ್ನುಪಯೋಗಿಸಬೇಕಾಯಿತು. ಆದರೆ ಅದರ ಪ್ರಕಾಶ!

ಜಗತ್ತಿನ ಪ್ರಳಯಭಯಂಕರ ದುರಂತಗಳಿಗೆ ಕಾರಣಗಳಾದ ಮಹಾ ವಜ್ರಗಳ ಮಾದರಿಗಳೆಲ್ಲಾ ಇಲ್ಲಿವೆ. ಹೋಪ್ ಡೈಮಂಡ್, ಷಾ ಆಫ್ ಪರ್ಶಿಯಾ, ಓರ್ಲೋಫ್, ಗ್ರಾಂಡ್ ಮೊಗಲ್, ಫ್ಲೋರೆಂಟೈನ್, ಕೋಹಿನೂರ್, ರೀಜೆಂಟ್, ಜ್ಯೂಬಿಲಿ ಮತ್ತು ಸೌತ್‌ಸ್ಟಾರ್ ಎಂಬಿವೇ ಮುಂತಾದುವೇ ಆ ಮಹಾವಜ್ರಗಳು!

ಹೋಪ್ ಡೈಮಂಡ್‌ನ ದುರ್ದಾಂತ ಕಥೆಯು ಆರಂಭವಾದದ್ದು 1477ರಲ್ಲಿ ಆ ವಜ್ರಕ್ಕಾಗಿಯೇ ಬರ್ಗಂಡಿಯ ಡ್ಯೂಕ್ ಚಾರ್ಲ್ಸ್‌ನ ಕಗ್ಗೊಲೆ ನಡೆದು, ಆ ಮಹಾರತ್ನವು ಹದಿನಾಲ್ಕನೆಯ ಲೂಯಿಯ ಕಿರೀಟವನ್ನಲಂಕರಿಸಿತು. ಮೊದಲು, ವಜ್ರಗಳಿಂದ ಅಲಂಕರಿಸಿಕೊಳ್ಳುತ್ತಿದ್ದವರು ಗಂಡಸರೇ. ಅದು ಈಚೆಗೆ ಹೆಂಗುಸರಿಗೆ ಹುಚ್ಚು ಹಿಡಿಸಿತು!

ಶ್ರೀರಂಗಪಟ್ಟಣದ ದೇವತಾ ವಿಗ್ರಹದ ಹಣೆಯಲ್ಲಿ ರಾರಾಜಿಸುತ್ತಿದ್ದ ಅಮೌಲ್ಯ ವಜ್ರವೇ 'ಓರ್ಲೋಫ್' (Orloff) ಫ್ರೆಂಚ್ ಸೈನಿಕನೊಬ್ಬನು ಇದನ್ನು ಕದ್ದನು. ಅವನು ಪ್ರಯಾಣ ಮಾಡುತ್ತಿದ್ದ ಹಡಗಿನ ಕ್ಯಾಪ್ಟನ್ ಲೋಭಪ್ರಭಾವಿತನಾಗಿ ಸೈನಿಕನಿಂದ ತಾನು ಅದನ್ನು ಕದ್ದನು. ಅದನ್ನು ರಷ್ಯಾದ ರಾಜಕುಮಾರನು ಚಕ್ರವರ್ತಿ ಕೇಥರೀನಳಿಗಾಗಿ 500,000 ಡಾಲರ್‌ಗಳಿಗೆ ಕೊಂಡುಕೊಂಡನು. 194-1/2 ಕ್ಯಾರೆಟ್ ತೂಕದ ಆ ವಜ್ರವನ್ನು ಸಹ ಪರಿಷ್ಕಾರಕ್ಕಾಗಿ ಆಮ್‌ಸ್ಟರ್‌ಡಾಂಗೆ ಕಳುಹಿಸಲಾಯಿತು.

ಕೋಹಿನೂರ್ ಸಹಾ ಭಾರತಕ್ಕೆ ಸೇರಿದ ಮತ್ತೊಂದು ಅನರ್ಘ್ಯ ರತ್ನ! 108 ಕ್ಯಾರೆಟಿನ ಆ ವಜ್ರ ಆಮ್‌ಸ್ಟರ್‌ಡ್ಯಾಂನಲ್ಲಿ ಪರಿಷ್ಕರಿಸಲ್ಪಟ್ಟಿತು. ಈಗ ಅದು ಬ್ರಿಟಿಷ್ ಸಾಮ್ರಾಜ್ಞಿಯ ರತ್ನಕಿರೀಟದಲ್ಲಿ ರಾರಾಜಿಸುತ್ತಿದೆ. ಇದರ ಚರಿತ್ರೆಯಲ್ಲಿ ಸದ್ಯಕ್ಕೆ ಯಾವ ಘಟನೆಯೂ ಇಲ್ಲವೆಂದರೂ, ಒಂದು ಕಾಲದಲ್ಲಿ ಇದು ಇದ್ದೆಡೆಯೆಲ್ಲಾ ರಕ್ತದ ಕಾಲುವೆ ಹರಿದಿದೆ. ಕಲ್ಲಿನನ್ ಎಂಬ ವಜ್ರ ಇದುವರೆಗೆ ಒಂದೇ ಒಂದು ಬಾರಿ ಮಾರಾಟವಾಗಿದೆ. ಅದರ ಬೆಲೆ 5,000,000 ಡಾಲರ್‌ಗಳು. ನೆಪೋಲಿಯನ್ನನ ರತ್ನಖಚಿತ ಖಡ್ಗದಲ್ಲಿ ಮೆರೆದ ರೀಜೆಂಟ್ ವಜ್ರದ ಬೆಲೆ 3,000,000 ಡಾಲರ್‌ಗಳು. ಇವೆಲ್ಲಾ ಆಮ್‌ಸ್ಟರ್‌ಡ್ಯಾಂನಲ್ಲಿ ಪರಿಷ್ಕರಿಸಲ್ಪಟ್ಟವು.

ವಜ್ರವನ್ನು ಕತ್ತರಿಸುವುದು ಸಾಮಾನ್ಯ ವಿಷಯವಲ್ಲ. ಕತ್ತರಿಸುವ ಮೊದಲು ಅದರ ಬಗ್ಗೆ ಅನೇಕ ತಿಂಗಳುಗಳ ಚಿಂತನೆ ನಡೆಯುತ್ತದೆ. ಕತ್ತರಿಸಿದಾಗ ಮೂಲ ವಜ್ರದ ಸುಮಾರು ಮೂರನೆಯ ಒಂದು ಭಾಗದಷ್ಟು ನಷ್ಟವಾಗಿ ಹೋಗುತ್ತದೆ. ನಿಜ ಹೇಳಬೇಕೆಂದರೆ ಒಂದು ಕಲ್ಲು ವಜ್ರವೆನಿಸಿಕೊಂಡಮಾತ್ರಕ್ಕೆ ಅದಕ್ಕೆ ಬೆಲೆ ಹುಟ್ಟುವುದಿಲ್ಲ. ಅದನ್ನು ಕತ್ತರಿಸುವ ಚಾತುರ್ಯ ಅದರ ಮೌಲ್ಯವನ್ನೇರಿಸುತ್ತದೆ. ಆಮ್‌ಸ್ಟರ್‌ಡ್ಯಾಂನ ಒಂದು ಪ್ರಮುಖ ವಜ್ರ ಕಾರ್ಖಾನೆಯು ತನ್ನ ಕಾರ್ಖಾನೆಯಲ್ಲಿನ ವಜ್ರದ ಹುಡಿಯನ್ನು ಅಲ್ಲಿನ ಒಂದು ಆಸ್ಪತ್ರೆಗೆ ದಾನ ಮಾಡುತ್ತದೆ.

ಒಂದು ವಜ್ರವನ್ನು ಕತ್ತರಿಸಲು 3 ದಿನಗಳಿಂದ 2 ವಾರಗಳ ತನಕ ತಗಲಬಹುದು. ನಂತರ, ಅದನ್ನು ಗ್ರಾಮಫೋನಿನ ತಿರುಗುವ ತಟ್ಟೆಯಂತಹ ಸಾಧನವೊಂದರ ಮೇಲೆ ಅವರು ನಿರೀಕ್ಷಿತ ಪ್ರಭೆಯು ಬರುವ ವರೆಗೂ ಇಡಲಾಗುವುದು. ನೆದರ್‌ಲೇಂಡ್ಸಿನ ಕೆಲವರಿಗೆ ಈ ವಜ್ರ ಕೆಲಸ ವಾಂಶೀಕವಾಗಿ ಬಂದಿದೆ. ಅಲ್ಲಿ ಹುಡುಗರು 15ನೇ ವಯಸ್ಸಿನಲ್ಲಿ ಇದರಲ್ಲಿ ತೊಡಗುವರೆಂದು ತಿಳಿದುಬಂದಿದೆ.

ವಜ್ರಕ್ಕೆ ಎಷ್ಟು ಮುಖಗಳಿವೆ, ಎಂದು ಸಾಮಾನ್ಯವಾಗಿ ಎಲ್ಲರೂ ಕೇಳುವ ಪ್ರಶ್ನೆ. ಸಾಮಾನ್ಯದ್ದಕ್ಕೆ 16 ಮುಖಗಳೂ, ಉತ್ಕೃಷ್ಟವಾದದ್ದಕ್ಕೆ 58 ಮುಖಗಳೂ ಇರುತ್ತವೆ. ಆಮ್‌ಸ್ಟರ್‌ಡ್ಯಾಂನಲ್ಲಿ ಕತ್ತರಿಸಲ್ಪಡುವ ವಜ್ರಗಳ ಎಲ್ಲಾ ಮುಖಗಳೂ ಸಮಾನ ಅಳತೆಯವಾಗಿರುತ್ತವೆಂಬುದು ಒಂದು ಆತಿಶಯ!

ಕತ್ತರಿಸುವ ಮುನ್ನ ಇರುವ ವಜ್ರವು ಆಮ್‌ಸ್ಟರ್‌ಡ್ಯಾಂನ ಹಸ್ತಕುಶಲಿಗಳ ಕೈಚಳಕಕ್ಕೆ ಸಿಕ್ಕಿದಾಗ ಅದರ ಪ್ರಕಾಶ ನೂರು ಪಟ್ಟು ಹೆಚ್ಚಿರುತ್ತದೆ!

— —

ಮೀನುಗಾರಿಕೆ ಅಭಿವೃದ್ಧಿ

ಮೀನುಗಾರಿಕೆ, ಮತ್ಸ್ಯ ಜೋಪಾಸನೆ ಮತ್ತು ವಿದೇಶ ರಫ್ತುಗಳ ಕಾರ್ಯಕ್ರಮವು ರಾಜ್ಯದಲ್ಲಿ ಸುಸಂಘಟಿತ ಮತ್ತು ಕ್ರಮಬದ್ಧ ರೀತಿಯಲ್ಲಿ ಮುಂದುವರಿಯುವಂತಾಗಲು ಕೇಂದ್ರ ಸರಕಾರವು ಕಾರ್ಪೊರೇಶನ್ ಒಂದನ್ನು ರಚಿಸಲು ನಿರ್ಧರಿಸಿದೆಯೆಂದು ಭಾರತ ಸರಕಾರದ ಮತ್ಸ್ಯಾಭಿವೃದ್ಧಿ ಸಲಹೆಗಾರ ಶ್ರೀ। ಗೋಪಿನಾಥ ಪಿಳ್ಳೆಯವರು ಇದೇ ತಾ. ೭ರಂದು ಮಂಗಳೂರಲ್ಲಿ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತ ತಿಳಿಸಿದ್ದಾರೆ. ಮತ್ಸ್ಯ ವ್ಯವಸಾಯಕ್ಕೆ ಸಂಬಂಧಪಟ್ಟ ಸರ್ವಸಾಧಾರಣ ಎಲ್ಲಾ ಕುಶಲ ಕಾರ್ಯಕ್ರಮಗಳಿಗಾಗಿ ಕೊಟ್ಟ ಮತ್ತು ಮುಂಬಯಿಗಳಲ್ಲಿ 114 ಲಕ್ಷ ರೂಪಾಯಿ ವೆಚ್ಚದಲ್ಲಿ ತರಬೇತಿ ಕೇಂದ್ರಗಳನ್ನು ರಚಿಸಲಾಗುವುದೆಂದೂ ಅವರು ತಿಳಿಸಿರುವರು.

— —

ಕಾಂಞಂಗಾಡಿನಲ್ಲಿ ಶ್ರೀ ನಿತ್ಯಾನಂದ ಪ್ರತಿಷ್ಠಾಮಹೋತ್ಸವ



ಬ್ರಹ್ಮೀಭೂತರಾದ
ಸ್ವಾಮಿ ನಿತ್ಯಾನಂದರವರು.

ಸ್ವಾಮಿ ನಿತ್ಯಾನಂದರ ವಿಗ್ರಹವನ್ನು ಪ್ರತಿಷ್ಠಾಪಿಸುವ ಹಾಗು ಹೊಸ ದೇವಾಲಯವನ್ನು ಉದ್ಘಾಟಿಸುವ ಭವ್ಯ ಸಮಾರಂಭವು ಕಳೆದ ತಾ 29ರಂದು ಕಾಂಞಂಗಾಡಿನಲ್ಲಿ ಅತ್ಯಂತ ವೈಭವಯುಕ್ತವಾಗಿ ನಡೆಯಿತು. ಊರ ಪರವೂರ ಸಾವಿರಾರು ಮಂದಿ ಈ ಉತ್ಸವದಲ್ಲಿ ಭಾಗವಹಿಸಿದ್ದಲ್ಲದೆ, ಮಹಾರಾಷ್ಟ್ರದ ಮುಖ್ಯಮಂತ್ರಿ ಶ್ರೀ। ಕನ್ನಮ್ವಾರ್, ಕೇರಳದ ಮುಖ್ಯಮಂತ್ರಿ ಶ್ರೀ। ಆರ್. ಶಂಕರ್‌ರವರು ಉಪಸ್ಥಿತರಿದ್ದರು.


ಪ್ರತಿಷ್ಠಾಮಹೋತ್ಸವದಂದು ಮಾತನಾಡುತ್ತ ಶ್ರೀ। ಕನ್ನಮ್ವಾರ್‌ರವರು,

"ಸ್ವಾಮೀಜಿಯವರನ್ನು ಅನುಸರಿಸಬೇಕೆಂಬ ಬಯಕೆ ನಿಮಗಿದ್ದರೆ ಮಹಾರಾಷ್ಟ್ರದಲ್ಲಿರುವ ಗಣೇಶಪುರಿಯಲ್ಲಿ ಅವರು ಗೈದ ಅಭಿವೃದ್ಧಿ ಹಾಗು ರಚನಾತ್ಮಕ ಕಾರ್ಯಕಥನವನ್ನು ಅನುಸರಿಸಿರಿ. ಧರ್ಮಶಾಲೆ, ಆಸ್ಪತ್ರೆ, ಶಾಲೆ ಮುಂತಾದ ಸಾರ್ವಜನಿಕ ಉಪಯೋಗ ಸಂಸ್ಥೆಗಳನ್ನು ಸ್ಥಾಪಿಸಿ ಸ್ವಾಮೀಜಿಯವರ ನೆನಪನ್ನು ಚಿರಸ್ಥಾಯಿಗೊಳಿಸಿರಿ" ಎನ್ನುತ್ತ ಸ್ವಾಮೀಜಿಯವರ ಸ್ಮರಣೆಗೋಸ್ಕರ ಕಾಂಞಂಗಾಡಿನಲ್ಲಿ ಒಂದು ತಾಂತ್ರಿಕ ಶಿಕ್ಷಣವೀಯುವ ಕಾಲೇಜು ಸ್ಥಾಪಿಸುವಂತೆ ಕೇರಳದ ಜನತೆಗೆ ಕರೆಯಿತ್ತರು.

ಕೇರಳದ ಮುಖ್ಯಮಂತ್ರಿ ಶ್ರೀ। ಆರ್. ಶಂಕರ್‌ರವರು ತಮ್ಮ ಭಾಷಣದಲ್ಲಿ ದೇವಾಲಯವನ್ನು ಕಟ್ಟಿಸಿದ ಹಾಗು ಸ್ವಾಮೀಜಿಯವರ ಮೂರ್ತಿಯನ್ನು ನಿರ್ಮಿಸಿದ ಭಕ್ತಜನರ ಸಾಧನೆಯನ್ನು ಅಭಿನಂದಿಸಿ, ಕಾಂಞಂಗಾಡಿನಲ್ಲಿ ತಾಂತ್ರಿಕ ಕಾಲೇಜನ್ನು ಸ್ಥಾಪಿಸಲು ತಗಲುವ ಅರ್ಧದಷ್ಟು ನೆರವನ್ನು ಕೇರಳದಿಂದ ಎತ್ತಿಕೊಡುವ ಭರವಸೆಯನ್ನಿತ್ತರು.

ದೇವಸ್ಥಾನ ಮತ್ತು ವಿಗ್ರಹ ನಿರ್ಮಾಣಕ್ಕೆ ಧನಸಹಾಯವಿತ್ತಿದ್ದ ಮುಂಬಾಯಿಯ ಶ್ರೀ। ಬಾಬುಭಾಯಿ ಮೆಹತಾರವರು ಕಾಲೇಜ್ ನಿರ್ಮಾಣಕ್ಕೆ ಬೇಕಾಗುವ ಶೇಕಡಾ 50ರಷ್ಟು ಧನವನ್ನು ಮಹಾರಾಷ್ಟ್ರದಿಂದ ಎತ್ತಿಕೊಡುವ ಆಶ್ವಾಸನೆಯೊಂದಿತ್ತು, ಅದಕ್ಕೆ ತನ್ನ ಪಾಲಾಗಿ ರೂ. 5000ಗಳನ್ನು ನೀಡಿದರು.

——



ಜಿಲ್ಲೆಗೆ ಸಕ್ಕರೆಯ ಆಮದು

ಜಿಲ್ಲೆಯ ಅಸ್ವಾಭಾವಿಕ ಸಕ್ಕರೆಯ ಅಭಾವವನ್ನು ಅನಲಕ್ಷಿಸಿ ತಾತ್ಕಾಲಿಕ ಹಂಚಿಕೆಗಾಗಿ 200 ಟನ್ನುಗಳಷ್ಟು ಸಕ್ಕರೆ ಕಳ್ಳಿಗೆ ಬಂದಿದ್ದು ಅದನ್ನು ಜನತೆಗೆ ಹಂಚಲಾಗುವುದು" ಎಂದು ದ. ಕ. ಜಿಲ್ಲಾಧಿಕಾರಿ ಶ್ರೀ। ಸಿ. ಜೆ. ಪದ್ಮನಾಭನವರು ಹೇಳಿಕೆಯನ್ನು ಕೊಟ್ಟಿರುತ್ತಾರೆ. ಮಂಡ್ಯ ಸಕ್ಕರೆ ಕಾರ್ಖಾನೆಯಿಂದ 100 ಟನ್ನು ಮತ್ತು ಪಾಂಡವಪುರದ ಕಾರ್ಖಾನೆಯಿಂದ 100 ಟನ್ನು ಹೀಗೆ 200 ಟನ್ನುಗಳಷ್ಟು ಸಕ್ಕರೆ ಜಿಲ್ಲೆಗೆ ಆಮದಾಗಿದ್ದು ಅದನ್ನು ಸೌತ್ ಕೆನರಾ ಸೆಂಟ್ರಲ್ ಕೋ-ಆಪರೇಟಿವ್ ಹೋಲ್‌ಸೇಲ್ ಸ್ಟೋರ್ ಸ್ವೀಕರಿಸಿ, ಎಲ್ಲ ತಾಲೂಕು ಕೋ-ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿಗಳಿಗೆ ಹಂಚಲಾಗುವುದು. ಈ ಸೊಸೈಟಿಗಳು ತಮ್ಮ ಪಾಲಿಗೆ ಬಂದ ಸಕ್ಕರೆಯನ್ನು ಕೃಷಿ ಸಹಕಾರ ಸಂಘಗಳಿಗೆ ಹಂಚಿಕೆಗಾಗಿ ನೀಡುವವು. ದಿನನಿತ್ಯದ ಮನೆಯ ಉಪಯೋಗಕ್ಕಾಗಿ ಸಕ್ಕರೆಯನ್ನು ಕಿಲೋಗೆ ರೂ. 1-20 ರಂತೆ ಮಾರಲಾಗುವುದಿದ್ದು ಒಮ್ಮೆಗೆ ಒಂದು ಕುಟುಂಬಕ್ಕೆ 1 ಕಿಲೋ ಸಕ್ಕರೆ ನೀಡಲಾಗುವುದೆಂದು ಜಿಲ್ಲಾಧಿಕಾರಿಯವರು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಉಗಾರ್ ಸಕ್ಕರೆ ಕಾರ್ಖಾನೆಯಿಂದ ಜಿಲ್ಲೆಗೆ 300 ಟನ್ನು ಬರುವುದಿದ್ದು ಇದನ್ನು ಕಿಲೋಗೆ 1-25ರಂತೆ ಮಾರಲಾಗುವುದು. ಮನೆಗಳ ದಿನನಿತ್ಯದ ಖರ್ಚಿಗೆ ಹಂಚುವಂತೆ ಈ ಸಕ್ಕರೆಯಿಂದ ಸ್ವಲ್ಪ ಅಂಶವನ್ನು ಚಿಲ್ಲರೆ ವ್ಯಾಪಾರಿಗಳಿಗೂ ನೀಡಲಾಗುವುದು. ಚಿಲ್ಲರೆ ವ್ಯಾಪಾರಿಗಳನ್ನು ತಹಶಿಲ್ದಾರರು ಆರಿಸುವರು ಎಂದು ಜಿಲ್ಲಾಧಿಕಾರಿಗಳು ತಿಳಿಸುತ್ತ, ಸಕ್ಕರೆಯ ಅಭಾವವಾಗಿದೆ ಎಂಬ ಗಾಬರಿಗೆ ಯಾವ ಕಾರಣವೂ ಇಲ್ಲ ಎಂದು ಹೇಳಿರುವರು.

ಬೇಳ ಕೊಲೆ ಪ್ರಕರಣ ಸೆಶನ್ಸಿಗೆ

ಬೇಳ ಗ್ರಾಮದ ಅಪ್ಪು ಮಾಸ್ಟರ್ ಎಂಬವರ ಕೊಲೆಗೆ ಸಂಬಂಧಪಟ್ಟು ಶ್ರೀ। ಪೂವಾಳ ಶಂಭಟರ ವಿರುದ್ಧ ಪೋಲೀ

ಮನುಷ್ಯ

1. ಮನುಷ್ಯನ ತಲೆಯಲ್ಲಿ ಸರ್ವಸಾಮಾನ್ಯವಾಗಿ ಒಂದು ಲಕ್ಷ ಕೂದಲುಗಳಿವೆ.

2. ಮನುಷ್ಯನ ದೇಹದಲ್ಲಿ ಒಂದು ಲಕ್ಷ ರಕ್ತವಾಹಿನಿಗಳಿವೆ.

3. ಬೆಳೆದ ಮನುಷ್ಯನ ದೇಹದಲ್ಲಿ ಪ್ರತಿ ಸೆಕುಂಡಿಗೊಮ್ಮೆ ಒಂದು ಕೋಟಿ ಗೋಲಕಗಳು ನಾಶವಾಗುತ್ತವೆ ಮತ್ತು ನಿರ್ಮಾಣವಾಗುತ್ತವೆ.

4. ಆರೋಗ್ಯವಂತ ಮನುಷ್ಯನ ದೇಹದ ಸ್ಥಿರ ಶಾಖ 98.4 F. ಆಗಿದೆ

5. ಮನುಷ್ಯನೊಬ್ಬನ ತಲೆಯಲ್ಲಿ 120 ಚದರ ಅಂಗುಲಗಳಷ್ಟು ಕೂದಲು ಬೆಳೆಯುವ ಸ್ಥಳವಿದ್ದು, ಎಪ್ಪತ್ತು ವರ್ಷಗಳ ಕಾಲದಲ್ಲಿ 15 ಪೌಂಡುಗಳಷ್ಟು ಕೂದಲು ಬೆಳೆಯುವುದು.

6. ಆರೋಗ್ಯವಂತ ಮನುಷ್ಯನ ನಾಡಿ ಬಡಿತ ನಿಮಿಷಕ್ಕೆ 72.

7. ಮನುಷ್ಯ ದೇಹವು ದಿನ ಒಂದಕ್ಕೆ 20 ಔನ್ಸ್ ನೀರು, ಒಂದು ಔನ್ಸ್ ಅಂಗಾರಾಮ್ಲ ಮತ್ತು ಒಂದು ಔನ್ಸ್ ಇನ್ನಿತರ ನಿರುಪಯುಕ್ತ ಪದಾರ್ಥ ಹೊರಚೆಲ್ಲುತ್ತದೆ.

8. ಮನುಷ್ಯನ ದೇಹದಲ್ಲಿ 500 ಬೇರೆ ಬೇರೆ ಗಾತ್ರದ ಸ್ನಾಯುಗಳಿವೆ. ದೇಹದ ಭಾರದ ಏಳನೇ ಮೂರು ಭಾಗದಷ್ಟು ತೂಕದ ಸ್ನಾಯುಗಳಿವೆ.

9. ಮನುಷ್ಯನು ನಿಜಕ್ಕೂ ದೇಹದ ವಿಶ್ರಾಂತಿಗಾಗಿ ಮಲಗದೆ ಮಿದುಳಿನ ವಿಶ್ರಾಂತಿಗಾಗಿ ಮಲಗುತ್ತಾನೆ. ನೋಡುವ-ಆಲೋಚಿಸುವ-ಮಾತನಾಡುವ ಎಲ್ಲಾ ಕ್ರಿಯೆಗೆ ಮಿದುಳೇ ಮೂಲಕಾರಣ ಆದುದರಿಂದ ಮಿದುಳಿಗೆ ವಿಶ್ರಾಂತಿ ಮುಖ್ಯ.

10. ಒಬ್ಬ ಸಾಮಾನ್ಯ ಮನುಷ್ಯ ದಿನಕ್ಕೆ 1,000 ಬಾರಿ ಕೈಗಳಿಂದ ವಿವಿಧ ಕೆಲಸ ಮಾಡುತ್ತಾನೆ.

11. ಕಣ್ಣಿನ ಚಲನವಲನ ನಿರ್ದೇಶಿಸಲು ಆರು ಸ್ನಾಯುಗಳಿವೆ.

12. ಮನುಷ್ಯನ ಮುಖದಲ್ಲಿ 36 ಸ್ನಾಯುಗಳಿವೆ.

13. ಸರ್ವಸಾಧಾರಣ ಮನುಷ್ಯನ ಹೃದಯವು ಪ್ರತಿದಿನವೂ 100,800 ಸಲ ಮಿಡಿಯುತ್ತದೆ. ಪ್ರತಿದಿನವೂ ಒಂದು ವ್ಯಾಗನ್ ತುಂಬುವಷ್ಟು ರಕ್ತವನ್ನು ಪಂಪು ಮಾಡುತ್ತದೆ. 720 ಟನ್ ಭಾರವನ್ನು ಒಂದಡಿ ಮೇಲೆತ್ತುವುದಕ್ಕೆ ಎಷ್ಟು ಬೇಕೋ ಅಷ್ಟು ಶಕ್ತಿಯನ್ನು ಅದು ಪ್ರತಿದಿನವೂ ಉಪಯೋಗಿಸುತ್ತದೆ.

14. 25 ವಾಟ್‌ನ ಬಲ್ಬನ್ನು ಉರಿಸಲು ಬೇಕಾದ ವಿದ್ಯುಚ್ಛಕ್ತಿಯು ಮನುಷ್ಯನ ದೇಹದಲ್ಲಿದೆ. ಇಲ್ಲವೇ ನೀರು ತುಂಬಿದ ನಾಲ್ಕು ದೊಡ್ಡ ಪಾತ್ರೆಗಳನ್ನು ಬಿಸಿಮಾಡುವಷ್ಟು ವಿದ್ಯುತ್ ಶಾಖವಿದೆ.

15. ಸಾಮಾನ್ಯ ಮನುಷ್ಯನು ತನ್ನ ಜೀವಿತಾವಧಿಯಲ್ಲಿ 52 ಟನ್ನುಗಳಷ್ಟು ಆಹಾರವನ್ನು ಸೇವಿಸುವನು. ಅಲ್ಲದೆ 19 ಸಾವಿರ ಗೆಲನ್‌ಗಳಷ್ಟು ದ್ರವವನ್ನು ತನ್ನ ಗಂಟಲೊಳಗೆ ಹೊಯ್ಯುವನು.

ಸಂಗ್ರಹ: **ಉಮೇಶರಾವ್,**
ಎಕ್ಕಾರ್.

——

ಸರು ಭಾರತ ಶಿಕ್ಷಾ ನಿಯಮದ 302 ನೇ ಕಲಮಿನನ್ವಯ ಆಪಾದನಾಪತ್ರ ಸಮರ್ಪಿಸಿದ್ದು, ಮೊಕದ್ದಮೆಯನ್ನು ಸೆಶನ್ಸ್ ವಿಚಾರಣೆಗೆ ಸಬ್ ಮೆಜಿಸ್ಟ್ರೇಟರು ಗುರಿಪಡಿಸಿದ್ದಾರಾಗಿ ಗೊತ್ತಾಗಿದೆ.

ಮೇ ದಿನಾಚರಣೆ

ದ. ಕ. ಜಿಲ್ಲಾ ಕಮ್ಯೂನಿಸ್ಟ್ ಪಕ್ಷ ಹಾಗು ವಿವಿಧ ಟ್ರೇಡ್ ಯೂನಿಯನ್‌ಗಳು ತಾ. 1ರಂದು ಮಂಗಳೂರಲ್ಲಿ 'ಮೇ ದಿನ'ವನ್ನು ಆಚರಿಸಿದುವು. ಕೆಲಸಗಾರ ಮೆರವಣಿಗೆಯೊಂದು ನಗರದ ಮುಖ್ಯ ಬೀದಿಗಳಲ್ಲಿ ಸುತ್ತಾಡಿ ಸಾಯಂಕಾಲ ಕೇಂದ್ರ ಮೈದಾನನ್ನು ಸೇರಿ ಅಲ್ಲಿ ಮೈಸೂರು ವಿಧಾನ ಸಭಾ ಸದಸ್ಯ ಶ್ರೀ| ಎ. ಕೃಷ್ಣಶೆಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ, ಮೇ ದಿನದ ಮಹತ್ವದ ಕುರಿತು ಭಾಷಣಗಳಾದುವು. ಹೊಸ ತೆರಿಗೆ ನೀತಿಗೆ ವಿರೋಧ, ಬಂಧಿತ ಕಮ್ಯೂನಿಸ್ಟ್ ಮುಖಂಡರ ಬಿಡುಗಡೆಗೆ ಒತ್ತಾಯ, ಮಂಗಳೂರಲ್ಲಿ ಮೆಡಿಕಲ್ ಕೊಲೇಜಿನ ಸ್ಥಾಪನೆ, ಚಿನ್ನದ ಕೆಲಸಗಾರರಿಗೆ ಯೋಗ್ಯ ಪರಿಹಾರ ಮುಂತಾದ ಕೇಳಿಕೆಗಳನ್ನು ಮುಂದಿಟ್ಟು ಕೆಲವು ಠರಾವುಗಳು ಸಭೆಯಲ್ಲಿ ಮಂಜೂರಾದುವು.

'ಕಲ್ಪನಾ ಥಿಯೇಟರ್ಸ್' ಉದ್ಘಾಟನೆ

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರ್ಸ್ ಲಿಮಿಟೆಡ್ ಇವರು ಸುಮಾರು 3 ಲಕ್ಷಕ್ಕೂ ಮಿಕ್ಕಿದ ವೆಚ್ಚದಲ್ಲಿ ನಿರ್ಮಿಸಿದ ಅತ್ಯಾಧುನಿಕ ಸೌಕರ್ಯವನ್ನೊಳಗೊಂಡ ಕಲ್ಪನಾ ಥಿಯೇಟರ್ಸ್ ಇದರ ಉದ್ಘಾಟನೆಯು ಇತ್ತೀಚೆಗೆ ಉಡುಪಿಯಲ್ಲಿ ಡಾ| ಟಿ. ಎಮ್ ಎ. ಪೈಯವರಿಂದ ನಡೆಯಿತು. ಕಂಪೆನಿಯ ಮೆನೇಜಿಂಗ್ ಡೈರೆಕ್ಟರ್ ಶ್ರೀ| ಎ ಜೆ. ಅಲ್ಸೆಯವರು ಸ್ವಾಗತಿಸಿ ಜ್ಯೊಂಟ್ ಮೆನೆಜಿಂಗ್ ಡೈರೆಕ್ಟರ್ ಶ್ರೀ| ಪಿ ಶೀನಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಶ್ರೀ| ಮನ್ನತ್ ಪದ್ಮನಾಭನ್‌ರಿಗೆ ಸತ್ಕಾರಕೂಟಗಳು

ಕೇರಳದ ಜನನಾಯಕ ಶ್ರೀ| ಮನ್ನತ್ ಪದ್ಮನಾಭನವರಿಗೆ ಕಳೆದ ತಾ. 1ರಂದು ಮಂಗಳೂರು 'ನವಭಾರತ' ದೈನಿಕದ ಪ್ರಕಾಶಕ ಶ್ರೀ| ಸಂಜೀವ ವಿ. ಕುಡ್ವರು ಒಂದು ಭೋಜನಕೂಟವಿತ್ತು ಸತ್ಕರಿಸಿದರು. ಈ ಕೂಟದಲ್ಲಿ ಭಾಷಣವಾಡುತ್ತ ಶ್ರೀ| ಮನ್ನತ್‌ರವರು "ಭಾರತದ ನೆಲದಲ್ಲಿ ಹುಟ್ಟಿ ಬಳೆದು, ಭಾರತದ ಅನ್ನವನ್ನುಂಡು, ವಿದೇಶಿ ಕ್ರಾಂತಿಕಾರಿ ತತ್ವ ಪ್ರತಿಪಾದಕರಾಗಿ ಭಾರತದ ಶ್ರೇಷ್ಠ ಪರಂಪರೆಯನ್ನು ತುಳಿದು ಮೇಲೇಳಲು ಪ್ರಯತ್ನಿಸುತ್ತಿರುವ ಕಮ್ಯೂನಿಸ್ಟರಿಗೆ ಭಾರತದಲ್ಲಿ ಸ್ಥಾನವಿಲ್ಲದಂತಾಗಬೇಕು. ಈ ಧ್ಯೇಯ ಕೇರಳದಲ್ಲಿ ಪ್ರತಿಫಲಿತವಾಗಿದೆ; ಅದು ಇನ್ನು ಭಾರತದಾದ್ಯಂತ ಹರಡಬೇಕು" ಮುಂತಾಗಿ ಹೇಳಿದರು. 'ನವಭಾರತ' ಸಂಪಾದ ಶ್ರೀ| ವಿ. ಎಸ್. ಕುಡ್ವರು ಸ್ವಾಗತಿಸಿ ಅಂತ್ಯದಲ್ಲಿ ಶ್ರೀ| ಸಂಜೀವ ವಿ. ಕುಡ್ವರು ಧನ್ಯವಾದಗಳನ್ನಿತ್ತರು.

ಶ್ರೀ| ಮನ್ನತ್ ಪದ್ಮನಾಭನ್ ಮತ್ತು ಅವರ ಪರಿವಾರದವರು ಆ ನಂತರ ಮರೋಳಿಯ ಕೆನರಾ ವರ್ಕ್ ಶೋಪಿಗೆ ತೆರಳಿ ಅಲ್ಲಿಯ ವಿವಿಧ ಯಾಂತ್ರಿಕ ಚಟುವಟಿಕೆಗಳನ್ನು ವೀಕ್ಷಿಸಿದರು. ವರ್ಕ್ ಶೋಪಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ| ಶ್ರೀನಿವಾಸ ವಿ. ಕುಡ್ವರು ಅತಿಥಿಗಳನ್ನು ಬೇರೆ ಬೇರೆ ವಿಭಾಗಗಳಿಗೆ ಕರೆದೊಯ್ದು ವಿವರಣೆ ನೀಡಿದರು.

ಸಿಂಡಿಕೇಟ್ ಬೇಂಕಿನವರು ನಗರದ ಕೇರಳ ಸಮಾಜದವರೊಂದಿಗೆ ಅದೇ ದಿನ ಸಂಜೆ ಬೇಂಕಿನ ಹಂಪನಕಟ್ಟೆ ಬ್ರಾಂಚಿನಲ್ಲಿ ಶ್ರೀ| ಮನ್ನತ್ ಪದ್ಮನಾಭನ್‌ರವರ ಗೌರವಾರ್ಥ ಒಂದು ಸತ್ಕಾರಕೂಟ ಏರ್ಪಡಿಸಿದರು. ಶ್ರೀ| ಟಿ. ಎ. ಪೈಯವರು ಸ್ವಾಗತಿಸಿ, ಶ್ರೀ| ಮನ್ನತ್‌ರವರ ವೈಶಿಷ್ಟ್ಯಪೂರ್ಣ ವ್ಯಕ್ತಿತ್ವದ ಕುರಿತು ಶ್ರೀ| ಕೆ. ಕೆ ಪಿ ಮೆನನ್ ಮತ್ತು ಡಾ| ಎಂ ವಿ. ಚಾರಿಯವರು ಮಾತನಾಡಿದರು. ಶ್ರೀ| ಮನ್ನತ್‌ರವರು ತಮ್ಮ ಭಾಷಣದಲ್ಲಿ ಸಂಕುಚಿತ ಪ್ರಾಂತೀಯ ಹಾಗು ಜಾತೀಯ ಭಾವಗಳನ್ನು ತೊರೆದು ಪೂರ್ಣಾರ್ಥದಲ್ಲಿ ಭಾರತೀಯರಾಗಿ ಬಾಳಲು ಜನತೆಗೆ ಕರೆಯಿತ್ತರು. ಕೊನೆಗೆ ಬೇಂಕಿನ ಶಾಖಾ ಮೆನೇಜರ್ ಶ್ರೀ| ಎಚ್. ಡಿ. ಎಸ್. ಪೈಯವರು ವಂದನಾರ್ಪಣೆಗೈದರು.

ಹೊಸ ವಿದೇಶ ವಿನಿಮಯ ವಿಭಾಗದ ಆರಂಭ

ಸಿಂಡಿಕೇಟ್ ಬೇಂಕಿನ ಹೊಸ ಸಾಧನೆಯಾದ ವಿದೇಶ ವಿನಿಮಯ ವಿಭಾಗವನ್ನು ಕಳೆದ ತಾ. 29ರಂದು ಸಂಜೆ ಉಡುಪಿ ಕಲ್ಪನಾ ಥಿಯೇಟರಿನಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಡಾ| ಟಿ. ಎಂ. ಎ. ಪೈಯವರು ಉದ್ಘಾಟಿಸಿದರು. ಕೇರಳದ ಜನನಾಯಕ ಶ್ರೀ| ಮನ್ನತ್ ಪದ್ಮನಾಭನ್‌ರವರು ಮುಖ್ಯ ಅತಿಥಿಗಳಾಗಿದ್ದರು. ಬೇಂಕಿನ ಡೈರೆಕ್ಟರರಲ್ಲೊಬ್ಬರಾದ ಶ್ರೀ| ಎನ್ ಎಸ್. ಪ್ರಭುರವರು ಸಭಾಧ್ಯಕ್ಷತೆ ವಹಿಸಿದ್ದರು.

ವಿವೇಕಾನಂದ ಶತಾಬ್ಧಿ ಸಮಿತಿಗೆ ಸಿಂಡಿಕೇಟ್ ಬೇಂಕಿನ ನೆರವು

ಬೆಂಗಳೂರಲ್ಲಿರುವ ವಿವೇಕಾನಂದ ಶತಾಬ್ದಿ ಸಮಿತಿಯ ಕಾರ್ಯಕಲಾಪಗಳಿಗೆ ರೂ. 5,000 ಹಾಗು ಮಂಗಳೂರಿನ ಶ್ರೀ ರಾಮಕೃಷ್ಣಾಶ್ರಮದ ಯೋಜನೆಗಳಿಗೆ ರೂ. 2,000 ಹೀಗೆ ರೂ. 7,000ಗಳ ನೆರವಿನ ಆಶ್ವಾಸನೆಯನ್ನು ಸಿಂಡಿಕೇಟ್ ಬೇಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ| ಟಿ. ಎ. ಪೈಯವರು, ಉಡುಪಿಗೆ ಆಗಮಿಸಿದ್ದ ಅಖಿಲ ಭಾರತ ವಿವೇಕಾನಂದ ಶತಾಬ್ದಿ ಆಚರಣಾ ಸಮಿತಿಯ ಅಧ್ಯಕ್ಷ ಶ್ರೀ| ಮನ್ನತ್ ಪದ್ಮನಾಭನ್‌ರವರಿಗೆ ನೀಡಿರುವರಾಗಿ ತಿಳಿದು ಬರುತ್ತದೆ.

ಡಿವಿಜನಲ್ ಕಮಿಶನರರು ಮಂಗಳೂರಿಗೆ

ಮೈಸೂರು ಡಿವಿಜನ್ನಿನ ಡಿವಿಜನಲ್ ಕಮಿಶನರ್ ಶ್ರೀ| ಆರ್. ಶ್ರೀನಿವಾಸನ್‌ರವರು ಈ ದಿನ (ತಾ. 5) ಮಂಗಳೂರಿಗೆ ಬರುವವರಿದ್ದು, ತಾ. 8ರ ವರೆಗೆ ಜಿಲ್ಲೆಯಲ್ಲಿ ಕಾರ್ಯಕ್ರಮಗಳನ್ನಿಟ್ಟುಕೊಳ್ಳುವರಾಗಿ ತಿಳಿದುಬಂದಿದೆ.

ಸಿಡಿಲುಬಡಿದು ಮರಣ

ಬಡಗನ್ನೂರು ಸಮೀಪದ ಪೆರ್ಗಕ್ಕು ಎಂಬಲ್ಲಿ ಕಳೆದ ತಾ. 28ರಂದು ಸಂಜೆ 6 ಗಂಟೆಗೆ ಸುಮಾರು 28 ವರ್ಷ ಪ್ರಾಯದ ಶಿವರಾಮ ಉಪಾಧ್ಯಾಯ ಎಂಬವರು ತಮ್ಮ ಮನೆಯ ಅಂಗಳದಲ್ಲೇ ಸಿಡಿಲುಬಡಿದು ತಕ್ಷಣ ಮೃತಹೊಂದಿದರಾಗಿ ತಿಳಿಯಲಾಗಿದೆ.

— —

ಶ್ರೀ| ಮನ್ನತ್ ನಿರ್ಗಮನ

ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಪುಣ್ಯಕ್ಷೇತ್ರಗಳಿಗೆ ಸಂದರ್ಶನವಿತ್ತು ಒಂದು ವಾರದ ತನ್ನ ಸಂಚಾರ ಕಾರ್ಯಕ್ರಮವನ್ನು ಮುಗಿಸಿ ಕಳೆದ ತಾ. 2ರಂದು ಬೆಳಗ್ಗೆ ಕೇರಳದ ಜನನಾಯಕ ಶ್ರೀ| ಮನ್ನತ್ ಪದ್ಮನಾಭನ್‌ರವರು ಮಂಗಳೂರಿಂದ ರೈಲಿನ ಮುಖಾಂತರ ಚಂಗನಶೇರಿಗೆ ತೆರಳಿದರು. ರೈಲ್ವೇ ಸ್ಟೇಷನ್ನಿನಲ್ಲಿ ಅವರನ್ನು ಬೀಳ್ಕೊಡಲು ಕೂಡಿದ ವರದಿಗಾರರೊಡನೆ ಮಾತನಾಡುತ್ತ ಶ್ರೀ| ಮನ್ನತ್‌ರವರು, ಸದ್ಯದಲ್ಲೇ ಕೇರಳದಲ್ಲಿ ನಡೆಯಲಿರುವ ಮೂರು ಉಪಚುನಾವಣೆಗಳಲ್ಲಿ ಕೇರಳ ನಾಯರ್ ಸರ್ವಿಸ್ ಸೊಸೈಟಿಯು ಕೊಂಗ್ರೆಸ್ ಅಭ್ಯರ್ಥಿಗಳನ್ನು ಬೆಂಬಲಿಸುವುದೆಂದು ತಿಳಿಸಿದರು.

....—

ನಿಧನ

ಮಂಗಳೂರು ಗವರ್ನ್‌ಮೆಂಟ್ ಕಾಲೇಜಿನ ಸೆಕೆಂಡರಿ ಟ್ರೈನಿಂಗ್ ವಿಭಾಗದ ಮುಖ್ಯೋಪಾಧ್ಯಾಯರಾಗಿದ್ದು ನಿವೃತ್ತರಾಗಿದ್ದ ಶ್ರೀ| ಬಿ. ಪಿ. ರೋಬರ್ಟ್ಸ್‌ರವರು ತಾ. 1ರಂದು ಮಧ್ಯಾಹ್ನ ತಮ್ಮ 70ನೇ ವರ್ಷ ಪ್ರಾಯದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

——

ಪಾಂಗಾಳನಾಯಕ್ ಬೇಂಕ್ ಲಿಮಿಟೆಡ್ ಉಡುಪಿ

ಈ ಸಂಸ್ಥೆಯು "ಶೆಡ್ಯೂಲ್ಡ್ ಬೇಂಕ್" ಆಗಿ ಮಾನ್ಯತೆ ಪಡೆಯಿತು

ಪಾಂಗಾಳನಾಯಕ್ ಬೇಂಕ್, ಲಿಮಿಟೆಡ್, ಉಡುಪಿ, ಈ ಬೇಂಕು, ರಿಸರ್ವ್ ಬೇಂಕ್ ಓಫ್ ಇಂಡಿಯಾದಿಂದ, ಶೆಡ್ಯೂಲ್ಡ್ ಬೇಂಕ್ ಆಗಿ, ಮಾನ್ಯತೆ ಪಡೆಯಿತೆಂದು ರಿಸರ್ವ್ ಬೇಂಕ್ ಓಫ್ ಇಂಡಿಯಾ ಆಕ್ಟಿನ ಸಂಬಂಧಪಟ್ಟ ನಿಬಂಧನೆ ಮೇರೆಗೆ ತಾ. 1-4-'63ರಲ್ಲಿ ಪ್ರಕಟಣೆ ಹೊರಡಿದೆ.

ಎರಡು ರಾಜ್ಯಗಳಲ್ಲಿ ಹತ್ತೊಂಭತ್ತು ಶಾಖೆಗಳಿರುವ ಈ ಬೇಂಕು, ನಮ್ಮ ಜಿಲ್ಲೆಯ ಹಿರಿಯ ಬೇಂಕುಗಳ ಶ್ರೇಣಿಯಲ್ಲಿ ಬಂದುದಕ್ಕೆ ನಮ್ಮ ಅಭಿವಂದನೆಗಳು.

——

ಪೂರ್ಣತ್ರಯೀಶ ಬೇಂಕು ಕೆನರಾ ಬೇಂಕಿನೊಡನೆ ವಿಲೀನವಾಯಿತು

ತ್ರಿಪುಣಿತ್ತುರದ ಪೂರ್ಣತ್ರಯೀಶ ವಿಲಾಸಂ ಬೇಂಕು, ತಾ. 29-4-63ರಂದು ಕೆನರಾ ಬೇಂಕಿನೊಡನೆ ವಿಲೀನವಾಯಿತು. 1961ರಿಂದಿತ್ತೀಚೆಗಿನ ವರೆಗೆ ಕೆನರಾ ಬೇಂಕಿನೊಡನೆ ವಿಲೀನಗೊಂಡ ಬೇಂಕುಗಳಲ್ಲಿ ಇದು ಐದನೆಯದು. ಪೂರ್ಣತ್ರಯೀಶ ಬೇಂಕಿನ ವಿಲೀನೀಕರಣದಿಂದ ಕೆನರಾ ಬೇಂಕಿಗೆ ಮತ್ತೆ ಹನ್ನೆರಡು ಶಾಖೆಗಳು ಹೆಚ್ಚಿ, ಕೇರಳದಲ್ಲಿ ಒಟ್ಟು 67 ಶಾಖೆಗಳಾಗಿವೆ; ಭಾರತದೊಳಗೆ ಒಟ್ಟು 1.4 ಶಾಖೆಗಳಾಗಿವೆ.

ಈ ವಿಲೀನೀಕರಣದ ಸಂತೋಷ ಸೂಚನಾರ್ಥ, ಕೆನರಾ ಬೇಂಕಿನ ಚೆಯರ್ಮೆನ್ ಶ್ರೀ| ಪಿ. ಕೆ. ಜನಾರ್ಧನ ಪ್ರಭುಗಳವರೂ ಪೂರ್ಣತ್ರಯೀಶ ವಿಲಾಸಂ ಬೇಂಕಿನ ಚೆಯರ್ಮೆನ್ ಶ್ರೀ| ರಾಮವರ್ಮ ತಂಪೂರಾನ್‌ರವರು ತ್ರಿಪುಣಿತ್ತುರದಲ್ಲಿ ತಾ. 28-4-'63ರಂದು ಒಂದು ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಗಣ್ಯಮಹನೀಯರು, ಉದ್ಯಮಿಗಳು, ವಣಿಜರೇ ಮೊದಲಾದವರು ಉಪಸ್ಥಿತರಿದ್ದ ಈ ಸಮಾರಂಭದಲ್ಲಿ ಕೊಚ್ಚಿಯ ಮಹಾರಾಜ ಶ್ರೀ| ರಾಮವರ್ಮರವರು ಅಧ್ಯಕ್ಷತೆ ವಹಿಸಿದ್ದರು.

——

ತಾ. 1—4—1963ರಿಂದ ಬದಲಾವಣೆಗೊಂಡ ರೈಲ್ವೇ ಸಮಯ

ಮಂಗಳೂರಿಂದ ಹೊರಡುವ ಬಂಡಿಗಳು

1 ಮಂಗಳೂರು—ಕಣ್ಣಾನೂರು ಪೆಸೆಂಜರ್—ಬೆಳಗ್ಗೆ 4-40
2 ಮಂಗಳೂರು—ಮದ್ರಾಸ್ ಮೈಲ್. —ಬೆಳಗ್ಗೆ 8-45
3 ಮಂಗಳೂರು—ಕಲ್ಲಿಕೋಟೆ ಪೆಸೆಂಜರ್—ಮಧ್ಯಾಹ್ನ 12-50
4 ಮಂಗಳೂರು—ಕಾಸರಗೋಡು ಪೆಸೆಂಜರ್—ಸಾಯಂ. 5-40
5 ಕೊಚ್ಚಿನ್ ಎಕ್ಸ್‌ಪ್ರೆಸ್ —ಸಾಯಂ. 6-20

ಮಂಗಳೂರಿಗೆ ತಲಪುವುದು

1 ಕಣ್ಣಾನೂರು—ಮಂಗಳೂರು ಪೆಸೆಂಜರ್—ಬೆಳಗ್ಗೆ 9-25
2 ಕೊಚ್ಚಿನ್ ಎಕ್ಸ್‌ಪ್ರೆಸ್ —ಬೆಳಗ್ಗೆ 11-50
3 ಮದ್ರಾಸ್—ಮಂಗಳೂರು ಮೈಲ್ ಸಾಯಂ. 4-30
4 ಕಲ್ಲಿಕೋಟೆ—ಮಂಗಳೂರು ಪೆಸೆಂಜರ್—ಅಪರಾಹ್ನ 3-20
5 ಕೊಚ್ಚಿನ್—ಮಂಗಳೂರು ಪೆಸೆಂಜರ್—ರಾತ್ರಿ 10-45

——

ಉಡುಪಿಯಲ್ಲಿ ಮನ್ನತ್ ಪದ್ಮನಾಭನ್

ಕೇರಳದ ಜನಪ್ರೀತ ಮುಖಂಡ ಶ್ರೀ| ಮನ್ನತ್ ಪದ್ಮನಾಭನ್‌ರವರು ಕಳೆದ ತಾ. 30ರಂದು, ಡಾ| ಟಿ. ಎಂ. ಎ. ಪೈಯವರ 66ನೇ ಹುಟ್ಟು ಹಬ್ಬದ ಅಂಗವಾಗಿ ಮಣಿಪಾಲ ಎಕಾಡೆಮಿ ಆಫ್ ಜನರಲ್ ಎಜ್ಯುಕೇಶನ್ ಕಮಿಟಿಯವರು ಏರ್ಪಡಿಸಿದ್ದ ಸಾರ್ವಜನಿಕ ಸಮಾರಂಭದಲ್ಲಿ ಡಾ| ಪೈಯವರ ಪ್ರತಿಮೆಯೊಂದನ್ನು ಅನಾವರಣಗೈದರು.

ಕೇರಳದ ಶ್ರೀ| ಮನ್ನತ್ ಪದ್ಮನಾಭನವರು ಉಡುಪಿಗೆ ತೆರಳುವ ಮುನ್ನ ಮಂಗಳೂರಿಗೆ ಬಂದಿಳಿದಾಗ ರೈಲ್ವೇ ನಿಲ್ದಾಣದಲ್ಲಿ ಮಂಗಳೂರು ನಗರ ಸಭೆಯ ಸಂಗಾಮಿ ಅಧ್ಯಕ್ಷ ಶ್ರೀಮತಿ ಒಕ್ಲೇವಿಯಾ ಅಲ್ಬುಕರ್ಕ್ ಮತ್ತಿತರ ಪುರಪ್ರಮುಖರು ಅವರಿಗೆ ಶುಭಾಗಮನ ಕೋರಿದ್ದರು.

——

ವಿವಾಹ ಸಮಾರಂಭ

ಶ್ರೀ| ಯು. ರಘುನಂದನ ಶೆಣೈಯವರ ಪುತ್ರ ಶ್ರೀ ಯು. ವಾಸುದೇವ ಶೆಣೈಯವರು, ಶ್ರೀ| ಕೆ. ಭಾಸ್ಕರರಾವ್‌ರವರ ಪುತ್ರಿ ಸೌ| ಸುಮತಿಯನ್ನು ತಾ. 27-4-63ರಂದು ಸಾಯಂಕಾಲ 6-43ರ ಗೋಧೂಳಿ ಲಗ್ನದಲ್ಲಿ, ಉರ್ವ ಕೆನರಾ ಹೈಸ್ಕೂಲಿನಲ್ಲಿ ವಿವಾಹವಾದರು.

ಶ್ರೀ| ಅಡಿಗೆ ವಿಟ್ಠಪ್ಪ ಶೆಣೈಯವರ ಪುತ್ರ ಶ್ರೀ ಅಡಿಗೆ ವಾಸುದೇವ ಶೆಣೈಯವರು, ಶ್ರೀ| ಬಸ್ತಿ ಶ್ರೀಧರ ಶೆಣೈಯವರ ಪುತ್ರಿ ಸೌ| ಸುಮತಿಯನ್ನು ತಾ. 2-5-63ನೇ ಗುರುವಾರ ಪೂರ್ವಾಹ್ನ 10-43ರ ಮಿಥುನ ಲಗ್ನದಲ್ಲಿ ಕದವಿನಲ್ಲಿರುವ ವಧೂಗೃಹದಲ್ಲಿ ವಿವಾಹವಾದರು.

——

ಲೇಖಾಂಕ ೮೭೯.

ವಿವಾಹಕಾಲ ನಿರ್ಣಯ—೬೨

(ಎಂ. ಸುಬ್ರಾಯನ್)

ರಾಹುವಿನ ಗುಣಧರ್ಮವನ್ನು ನೋಡುವಾಗ ತನ್ನ ಪ್ರಭಾವವನ್ನು ಬೀರುವ ಶಕ್ತಿ ರಾಹುವಿಗಿರುತ್ತದೆ. ತನ್ನ ಪ್ರಭಾವವನ್ನು ಅನ್ಯರಲ್ಲಿ ಬೀರಿ ತನ್ನ ಕೆಲಸವನ್ನು ಸಾಧಿಸಲಿರುವ ಶಕ್ತಿ ಕಂಡುಬರುವುದು. ತನ್ನಲ್ಲಿದ್ದಾಗ ಅನ್ಯರಲ್ಲಿಗೆ ಹೋಗಲಾರನು. ಜೀವನದಲ್ಲಿ ಅಪಯಶಸ್ಸು ಕಡಮೆಯಾಗಿರುವುದು. ನ್ಯತಿಕಾಚಣೆ ಅತ್ಯುತ್ತಮವು ಮತ್ತು ಅತಿ ಪ್ರಖರವಾಗಿರುವುದು. ಭಾಗ್ಯಶಾಲಿಯಾಗಿರುವನು. ಅನ್ಯರ ಸಂಸ್ಕೃತಿಯನ್ನು ಗೌರವಿಸುವನು. ಪರಮತ ಪರಧರ್ಮ ಸಹಿಷ್ಣುತೆ ಇರುವುದು. ಬೇರೆಯವರ ಸುಖ ದುಃಖಗಳ ಕಾಳಜಿಯುಳ್ಳವನಾಗಿದ್ದು ಸಹಾಯಿಸುವನು. ತನ್ನ ಆಪ್ತ ಮತ್ತು ಹಿರಿಯರ ಸಹಾನುಭೂತಿಪೂರ್ವಕ ಮಾತನಾಡುವನು. ಅತ್ಯಂತ ಧೈರ್ಯಶಾಲಿಯಾಗಿರುವನು. ಅತಿ ಬುದ್ಧಿವಂತನಾಗಿದ್ದು ಸದಾ ಆ ಕಡೆ ಗಮನಯುಕ್ತನಾಗಿರುವನು. ಯಾವಾಗಲೂ ಕೆಲಸದಲ್ಲಿ ಆಸಕ್ತಿಯುಳ್ಳವನಾಗಿದ್ದು ಅದರಲ್ಲಿಯೇ ಮುಳುಗಿದವನಾಗಿರುವನು. ಸಂಪತ್ತಿನ ವ್ಯವಹಾರ ವಿಷಯದಲ್ಲಿ ದಕ್ಷನೂ ಸರಳನೂ ಆಗಿರುವನು. ಈ ಉತ್ತಮ ಫಲ, ರಾಹು ಸರ್ವ ಗ್ರಹರ ಶುಭ ಯೋಗದಲ್ಲಿದ್ದಾಗ ಕಂಡುಬರುವುದು.

ರಾಹು ಇತರ ಗ್ರಹರ ಅಶುಭಯೋಗಗೊಂಡು ಇದ್ದರೆ ಬುದ್ಧಿಹೀನನಾಗಿರುವನು. ದುಷ್ಟ ಸ್ವಭಾವಯುಕ್ತವಾಗಿದ್ದು ಜನ ಸಹವಾಸದಿಂದ ವಿಮುಖನಾಗಿರುವನು. ಮಹಾ ಸ್ವಾರ್ಥದಿಂದ ಕೂಡಿದ್ದು ತಾನೆಂಬ ಭಾವನೆ ಅಧಿಕವಾಗಿರುವುದು. ತಾನು ದೊಡ್ಡ ನೆಲೆಯುಳ್ಳವನಾಗಿರುವೆನೆಂಬ ವಿಚಾರಯುಕ್ತನಾಗಿರುವನು. ದುರಾಗ್ರಹಿಯೂ ಮತ್ಸರಿಯೂ, ವಿಶ್ವಾಸಕ್ಕೆ ಅಯೋಗ್ಯನೂ ಮಾತು ವರ್ತನೆಗಳಲ್ಲಿ ತುಂಬಾ ಸುಳ್ಳು, ತಪ್ಪು ವಂಚನೆಗಳುಳ್ಳವನೂ, ತಿರುಗಾಟದಿಂದ ಕೂಡಿದವನೂ, ದುಷ್ಟನೂ, ಯಾವ ಉದ್ಯೋಗ ವ್ಯವಹಾರಗಳು ಇಲ್ಲದವನೂ ಅರ್ಧಮಾರ್ಗವಾಗಿದ್ದು ಕೊಳ್ಳುವವನೂ ವಿಸಂಗತ ಸ್ವಭಾವದವನೂ, ನಿರ್ಲಜ್ಜನೂ ಧ್ಯೇಯರಹಿತನೂ, ಅನ್ಯರ ಕೆಟ್ಟ ವರ್ತನೆಯ ಕಡೆ ಗಮನಿಸಿ ನಡೆಯುವವನೂ, ಚುಚ್ಚುವಂತೆ ಮಾತನಾಡುವವನೂ, ತನ್ನ ಅಭಿಪ್ರಾಯ ಸರಿ, ತಾನು ಒಬ್ಬ ಪ್ರಮಾಣ ಪುರುಷನೆಂದು ಅಟ್ಟಹಾಸದಿಂದ ಗರ್ಜಿಸಿ ಸುಳ್ಳನ್ನೂ ಪ್ರತಿಪಾದಿಸಿ ಮಾತನಾಡುವವನೂ, ಅನ್ಯರ ಅಹಿತವನ್ನೇ ಚಿಂತಿಸುವವನೂ, ತನ್ನ ಮಾತು ಕೃತಿಗಳಿಂದ ತನ್ನ ನೆಲೆಗೆ ಕುಂದನ್ನು ತಂದುಕೊಳ್ಳುವವನೂ, ಮಹಾ ಅಹಂಕಾರಿಯೂ ಕ್ರೂರನೂ ಆಗಿರುವನು. ಈ ರೀತಿಯ ಅಶುಭ ಫಲ ಅಶುಭ ಯೋಗದಿಂದುಂಟಾಗುವುದು.

ರಾಹು ಯಾವಾಗಲೂ ಅಪಸವ್ಯವಾಗಿ ಹೋಗುತ್ತಿರುವನು. ಆತನು ಧನ, ಲಗ್ನ, ದ್ವಾದಶ, ಏಕಾದಶಾದಿಯಾಗಿ ಈ ರೀತಿಯಿಂದ ಸಂಭ್ರಮಣೆಗೊಳ್ಳುತ್ತಿರುವನು. ಛಾಯಾಗ್ರಹನಾದುದೇ ಇದಕ್ಕೆ ಕಾರಣ. ಯಾವಾಗಲೂ [illegible]ರಳು ವಿರುದ್ಧ ದಿಕ್ಕಿನಲ್ಲಿ ತೋರುತ್ತಿರುವುದು. ಪೂರ್ವಾಭಿಮುಖ ಪ್ರದಕ್ಷಿಣೆ ಭೂಮಿಯದು. ಇದರಿಂದ ವಸ್ತುಗಳ ಆಕರ್ಷಕತೆ ಮೊದಲಾದುವನ್ನು ನಾವು ನಿರ್ಣಯಿಸಬೇಕಿದೆ. ರಾಹು ಪೂರ್ವದಿಂದ ಪಶ್ಚಿಮಾಭಿಮುಖ ಹೋಗುವ ಗ್ರಹ. ಇದರಿಂದ ಎಲ್ಲಾ ಗ್ರಹರೂ ರಾಹುವಿನ ಮುಖ ಸಂಪರ್ಕಗೊಳ್ಳುತ್ತಿರುವರು.

ರಾಹು ಚಲನೆಯ ಉದಾಹರಣೆಯನ್ನು ತಿಳಿಸುವಾಗ ರಾಹು ಈಗ ಕರ್ಕಟಕದಲ್ಲಿ. ಚಂದ್ರ ಕರ್ಕಟಕದ ಹತ್ತನೆ ಭಾಗಿಯಲ್ಲಿರುವನೆಂದು ತಿಳಿಯೋಣ. ರಾಹು ಕರ್ಕಟಕದ ಹದಿನೈದನೆ ಭಾಗದಲ್ಲಿದ್ದರೆ ರಾಹುವಿನ ಮುಖದಲ್ಲಿ ಪ್ರವೇಶಗೊಳ್ಳುವನು. ಈ ಯೋಗ ಅತಿ ಶುಭವಾಗಿರುವುದು. ಚಂದ್ರ ಇಪ್ಪತ್ತು ಭಾಗದಲ್ಲಿದ್ದು ರಾಹು ಹದಿನೈದು ಭಾಗದಲ್ಲಿದ್ದರೆ ರಾಹುವಿನ ಹಿಂದೆ ಚಂದ್ರನು ಬೀಳುವನು. ಈ ಯೋಗ ಮಧ್ಯಮ ಶುಭ ಫಲದ್ದು. ರಾಹು ಹದಿನೈದರಲ್ಲಿದ್ದು ಚಂದ್ರನು ಇಪ್ಪತ್ತೇಳನೆ ಭಾಗದಲ್ಲಿದ್ದರೆ ರಾಹುವಿನ ಅತಿ ಹಿಂಬಳಿ ಬೀಳುವನು. ಇದು ಅತ್ಯಂತ ಅಶುಭವಾಗಿದೆ. ಹೀಗೆ ರಾಹುವಿನ ಫಲವಿವೇಚನೆಯನ್ನು ಮಾಡಬೇಕಾಗುತ್ತದೆ. ರಾಹುವಿಗೆ ಶುಕ್ರ ಸಂಪರ್ಕ ಏನು, ಅವನು ಎಲ್ಲೆಲ್ಲಿ ನೆಲಸಿದಾಗ ಯಾವ ಯಾವ ಫಲಗಳು ಎಂಬುದನ್ನೂ ವಿವಾಹ ವಿಷಯದಲ್ಲಿ ವಿಚಾರಿಸುವ ಅಗತ್ಯವಿದೆ. ದಶ ವಿಚಾರದಲ್ಲಿಯೂ ರಾಹುವನ್ನು ಚಿಂತಿಸುವಾಗ ಕುಜ ರಾಹು, ರಾಹು ಬೃಹಸ್ಪತಿ ಸಂಧಿಗಳು ಹೇಗಿದ್ದರೆ ಅನಿಷ್ಟಗಳೆಂದು ತಿಳಿಯುವುದು ಅಗತ್ಯ. ಅದನ್ನು ಮುಂದೆ ಕೊಡಲಾಗುವುದು. (ಸಶೇಷ)

——

ವಸ್ತುಪ್ರದರ್ಶನ
ಸಾಂಸ್ಕೃತಿಕೋತ್ಸವ

ವರ್ಷವರ್ಷವೂ ಜರಗುವ ಕುಂದಾಪುರ ಬೋರ್ಡ್ ಹೈಸ್ಕೂಲಿನ ಹಳೇ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಈ ಬಾರಿ ಎಂದಿನಂತೆ ಮೂರು ದಿನಗಳಲ್ಲಿ ಮುಗಿಯದೆ, ಎಪ್ರಿಲ್ ತಾ. 18ರಿಂದ 28ರ ವರೆಗೆ ಕಲಾವಿದರಿಗೆ, ಕಲಾಭಿಮಾನಿಗಳಿಗೆ ಹಾಗು ರಸಿಕರಿಗೆ ಹನ್ನೊಂದು ದಿನದ ರಸದೌತಣವಿತ್ತು ಮುಕ್ತಾಯವಾಯಿತು. ವಸ್ತುಪ್ರದರ್ಶನ ಮತ್ತು ಸಾಂಸ್ಕೃತಿಕೋತ್ಸವಗಳು ದಿನಂಪ್ರತಿ ಇದ್ದುವು

——

ಈ ವಾರದ ಭವಿಷ್ಯ

ಶ್ರೀ ಎನ್. ಸುಬ್ರಾಯನ್,
ಸಾಹಿತ್ಯ ಮತ್ತು ಜ್ಯೋತಿಷ್ಯ ಶಿರೋಮಣಿ.

ತಾರೀಕು ೫—೫—೧೯೬೩ರಿಂದ
ತಾ. ೧೧—೫—೧೯೬೩ರ ವರೆಗೆ.

ಮೇಷ: ನಿರಂತರ ಕೆಲಸಗಳಿಂದ ಕೂಡಿದವರಾಗಿದ್ದು ವಿರಾಮ ಕಡಮೆಯಾಗಿರುವುದು. ಸಂಪತ್ತಿನ ಪ್ರಗತಿಗಿರುವ ಸಂಘಟನೆಯು ಕಂಡುಬರುವುದಾಗಿದೆ. ನವೀನ ವಾತಾವರಣ ಸಮಸ್ಯೆಗಳಿಂದ ಕೂಡಿದವರಾಗಿ ತೋರುವಿರಿ. ವಿದ್ಯಾಜೀವನದವರು ಅಭಿವೃದ್ಧಿಗೊಳ್ಳಲಿರುವರು.

ವೃಷಭ: ನಿಮಗೆ ಈಗಿನ ರವಿಯು ಯಾವ ಪರಿಣಾಮವನ್ನೂ ಕೊಡುವನಲ್ಲ. ಶುಭಕೆಲಸಗಳಿಗಿರುವ ಸಂಪರ್ಕವು ತೋರುವುದಾಗಿದೆ. ದೇಹಾರೋಗ್ಯದ ನೆಲೆಯು ಉತ್ತಮವಾಗಿರುವುದಿಲ್ಲ. ಕುಟುಂಬದಲ್ಲಿ ಶುಭಕೆಲಸಗಳು ನಡೆಯುಲಿರುತ್ತವೆ ಪ್ರಯಾಣವಾಗಲಿರುವುದು.

ಮಿಥುನ: ಹಲವಾರು ವಿಚಾರಗಳಿಂದ ಕೂಡಿದವರಾಗಿದ್ದು ಅವನ್ನು ಸಾಧಿಸಲಿರುವ ಯತ್ನಯುಕ್ತರಾಗುವಿರಿ. ದೊಡ್ಡ ಮನುಷ್ಯರ ಭೇಟಿ ಮತ್ತು ಸಹಾಯಗಳು ಸಿದ್ಧಿಸುವವು.. ನೌಕರರು ಸ್ಥಾನಾಂತರವನ್ನು ಹೊಂದಲಿರುವ ಯೋಗವಿದೆ.

ಕರ್ಕಟಕ: ತುಂಬಾ ಕೆಲಸಗಳಿರುತ್ತವೆ ಸಂಪತ್ತಿನ ನೆಲೆಯು ಉತ್ತಮವಾಗಿರುವುದಿಲ್ಲ ಬಂಧುಜನರ ವಿಯೋಗವನ್ನು ಹೊಂದಲಿರುವಿರಿ. ದೇಹಾರೋಗ್ಯ ವಿಷಯದಲ್ಲಿ ಜಾಗರೂಕರಾಗಿರಿ. ಪ್ರಯಾಣವನ್ನು ಮಾಡಲಿರುವ ಯೋಗವಿರುವುದು.

ಸಿಂಹ: ಸಾಮುದಾಯಿಕ ವಿಷಯಗಳಲ್ಲಿ ಆಸಕ್ತಿಯು ಅಧಿಕವಾಗಿರುತ್ತದೆ. ಹೊಸ ಗೆಳೆಯರ ಸಂಪರ್ಕ ಸಹಾಯ ಸುಖವೃದ್ಧಿಗಳುಂಟಾಗಲಿರುತ್ತವೆ. ಕುಟುಂಬಿಯರ ಅಗಲುವಿಕೆಯು ಸಂಭವಿಸುವುದು. ವ್ಯಾಪಾರಿಗಳಿಗೆ ಈ ವಾರ ಪ್ರಗತಿದಾಯಕವಾಗಿ ಕಂಡುಬರುವುದು.

ಕನ್ಯಾ: ಹಲವಾರು ವಿಚಾರಗಳಿಂದ ಕೂಡಿದವರಾಗಿರುವಿರಿ. ಕುಟುಂಬದಲ್ಲಿ ಶುಭಕೆಲಸಗಳು ನಡೆಯಲಿರುತ್ತವೆ ಬಂಧುಜನರ ವಿಯೋಗವಿದೆ ಶತ್ರುನಾಶ, ನಷ್ಟ, ಸಂಪತ್ತಿನ ಲಾಭಾವಕಾಶಗಳು ಕಾಣುವವು. ಪ್ರಯಾಣವನ್ನು ಮಾಡಲಿರುವಿರಿ. ನೌಕರರಿಗೆ ಪ್ರಗತಿಯು ಇದೆ

ತುಲಾ: ನಿಮ್ಮವರೇ ನಿಮಗೆ ವಿರೋಧಿಗಳಾಗಿ ನೆಲಸುವರು. ಆಕಸ್ಮಿಕ ಘಟನೆಯಿಂದ ಕೂಡಿದವರಾಗಿ ಕಂಡುಬರುವಿರಿ. ವಿದ್ಯಾಜೀವನದವರು ಅಭಿವೃದ್ಧಿಯನ್ನು ಹೊಂದಲಿರುವರು. ನೌಕರರು ಸ್ಥಾನಾಂತರವನ್ನು ಹೊಂದಲಿರುವರು. ದೂರ ಪ್ರಯಾಣಗಳುಂಟಾಗುವವು.

ವೃಶ್ಚಿಕ: ಕೆಲಸಗಳೆಲ್ಲಾ ಅಪೂರ್ಣಗಳಾಗಿ ಕಂಡುಬರುವವು. ಧಾರ್ಮಿಕ ವಿಷಯದಲ್ಲಿ ಆಸಕ್ತಿಯು ಸಂಭವಿಸಲಿದೆ. ದೊಡ್ಡ ಮನುಷ್ಯರ ಭೇಟಿ ಸಹಾಯಗಳು ಸಿದ್ಧಿಸಲಿರುತ್ತವೆ. ವಿದ್ಯಾರ್ಥಿಗಳು ಪ್ರಗತಿಯಿಂದ ಕೂಡಿದವರಾಗುವರು ಪ್ರಯಾಣವನ್ನು ಮಾಡಲಿರುವ ಯೋಗವಿದೆ

ಧನು: ನಿಮ್ಮವರೇ ನಿಮಗೆ ಅನುಕೂಲರಾಗಿರುವುದಿಲ್ಲ. ಸಂಪತ್ತಿನ ಪ್ರಗತಿಗಿರುವ ಸಂಪರ್ಕವು ಕಂಡುಬರುವುದಾಗಿದೆ. ದೇಹಾರೋಗ್ಯ ವಿಷಯದಲ್ಲಿ ಜಾಗರೂಕತೆಯುಳ್ಳವರಾಗಬೇಕು. ಕೋರ್ಟು ಕಾರ್ಯಗಳು ಮುಂದುವರಿಯುವವು. ವಾಸಸ್ಥಾನದ ಬದಲಾವಣೆ ಇದೆ.

ತುಲಾ: ಮಾನಸಿಕ ಶಾಂತಿ ಕಡಮೆ. ಹಿರಿಯರ ವಿಯೋಗವಾಗಲಿರುವುದು. ದೊಡ್ಡ ಮನುಷ್ಯರ ಭೇಟಿ ಸಹಾಯಗಳಿರುತ್ತವೆ. ಸಂಪತ್ತಿನ ಪ್ರಗತಿಗಿರುವ ಸಂಪರ್ಕಯುಕ್ತರಾಗುವಿರಿ. ವ್ಯಾಪಾರಿಗಳಿಗೆ ಈ ವಾರ ಪ್ರಗತಿಯುದ್ದಾಗಿರುವುದು. ಪ್ರಯಾಣವನ್ನು ಮಾಡಲಿರುವ ಯೋಗವಿದೆ,

ಕುಂಭ: ಹೊಸ ಹೊಸ ವಿಚಾರ ಸಂಪರ್ಕಗಳುಂಟಾಗುತ್ತವೆ. ಸಂಪತ್ತಿನ ಪ್ರಗತಿಯನ್ನು ಹೊಂದಲಿರುವಿರಿ. ಧಾರ್ಮಿಕ ವಿಷಯಗಳಿಗಾಗಿ ಧನವ್ಯಯವಾಗುವುದು. ವಾಸಸ್ಥಾನದ ಬದಲಾವಣೆಯ ಕಡೆಗೆ ಗಮನಯುಕ್ತರಾಗುವಿರಿ ನೌಕರರಿಗೆ ಪ್ರಗತಿಕರ.

ಮೀನ: ಕೆಲಸಗಳೆಲ್ಲಾ ಅಪೂರ್ಣಗಳಾಗಿಯೇ ಕಂಡುಬರುವವು ಕುಟುಂಬ ವಾತಾವರಣವು ಚೆನ್ನಾಗಿರುವುದಿಲ್ಲ. ದೇಹಾರೋಗ್ಯದ ವಿಷಯದಲ್ಲಿ ಜಾಗರೂಕತೆಯಿಂದ ಕೂಡಿದವರಾಗಬೇಕು. ಪ್ರಯಾಣವನ್ನು ಮಾಡಲಿರುವ ಯೋಗವಿದೆ ನೌಕರರು ಅಭಿವೃದ್ಧಿಯಿಂದ ಕೂಡಿದವರಾಗುವರು.

ವಾರದ ಪ್ರಭಾತ ಪಂಚಾಂಗ

ವೃಷಭ, ವೈಶಾಖ ಶುದ್ಧ

ತಾರೀಖು	ವಾರ	ತಿಥಿ		ನಿತ್ಯ ನಕ್ಷತ್ರ	ಯೋಗ	ಕರಣ	ವಿಷ	ಅಮೃತ	ಮಹಾನಕ್ಷತ್ರ
		ಸೌರ	ಚಾಂದ್ರ						
5	ರವಿ	೨೨	ದ್ವಾ ೨೪	ಹ ೬೦	ಹರ್ ೪೮	ಬಾ ೨೪	೨೩	೪೯। ।	ಭರಣಿ ೩೯।।।
6	ಚಂದ್ರ	೨೩	ತ್ರ ೩೦	ಹ ೬।।।	ವ ೩೦।।	ತೈ ೩೦	೨೯।	೫೬	೩೭
7	ಕುಜ	೨೪	ಚ ೩೬	ಚಿ ೧೪	ಸಿ ೩೩	ಗ ೩	೨೯।।।	ಶೇ ।।- ೫೬।।।	೪೧।।
8	ಬುಧ	೨೫	ಹು ೪೨ ಬಹುಳ	ಸ್ವಾ ೨೧।।	ವ್ಯ ೩೫।	ಬಾ ೯	೩೭	೧।	೪೫।।।
9	ಗುರು	೨೬	ಪಾ ೪೭।।	ವಿ ೨೮।।	ವರಿ ೩೭	ಬಾ ೧೪।।।	೩೯।।।	೩।।।	೫೦।
10	ಶುಕ್ರ	೨೭	ಬಿ ೫೨।।	ಅ ೩೫।	ಪ ೩೮।।।	ತೈ ೨೦	೫೦।।	೬।	೫೪।।
11	ಶನಿ	೨೮	ತ ೫೭	ಜ್ಯೆ ೪೧।	ಶಿ ೪೦	ವ ೨೪।।।	೦	೧೭	೫೮।।।

ಅಮರ ಶಿಲ್ಪಿ ಜಕ್ಕಣಾಚಾರ್ಯ

ಕನ್ನಡದ ಪ್ರಥಮ ವರ್ಣರಂಜಿತ ಚಿತ್ರ "ಅಮರ ಶಿಲ್ಪಿ ಜಕ್ಕಣಾಚಾರ್ಯ"ದ ಚಿತ್ರೀಕರಣ ಕಾರ್ಯವು ತ್ವರಿತಗತಿಯಿಂದ ಚಿತ್ರದ ಸಾಕಷ್ಟು ಭಾಗವು ಈಗಾಗಲೇ ತಯಾರಾಗಿದೆ. ಇತ್ತೀಚೆಗೆ ಜಕ್ಕಣನು ತನ್ನ ಪ್ರತಿಜ್ಞೆಗೊಳಪಟ್ಟು ತನ್ನ ಬಲಗೈಯನ್ನೇ ಕತ್ತರಿಸಿಕೊಳ್ಳುವ ಸಂದರ್ಭವನ್ನು ಚಿತ್ರೀಕರಣಮಾಡಲಾಗಿದೆ.

ರಾಜಕುಮಾರ್, ಉದಯಕುಮಾರ್, ಸರೋಜಾದೇವಿ ಮತ್ತು ವಿ. ನಾಗಯ್ಯ ಮುಖ್ಯ ಪಾತ್ರಧಾರಿಗಳು. ಚಿ. ಸದಾಶಿವಯ್ಯ ಹಾಡುಗಳನ್ನು ಮತ್ತು ಸಂಭಾಷಣೆಗಳನ್ನು ರಚಿಸಿದ್ದಾರೆ. ರಾಜೇಶ್ವರರಾವ್ ಸಂಗೀತವನ್ನು ನೀಡಿದ್ದಾರೆ.

ಈ ವಾರ
ಮಂಗಳೂರಿನ
ಚಿತ್ರಮಂದಿರಗಳಲ್ಲಿ

ಸೆಂಟ್ರಲ್ — 2ನೇ ವಾರ
ಡಾ| ವಿದ್ಯಾ (ಹಿಂದಿ)
ವೈಜಯಂತಿಮಾಲಾ— ಮನೋಜ್
ಹೆಲೆನ್—ಮಹಮೂದ್.
ದಿನಂಪ್ರತಿ 3 ದೇಖಾವೆಗಳು.

ರೂಪವಾಣಿ — 3ನೇ ವಾರ
ದಿಲ್ ತೇರಾ ದೀವಾನಾ
(ಹಿಂದಿ)
ಶಮ್ಮಿಕಪೂರ್-ಮಾಲಾಸಿನ್ಹಾ-ಮಹಮೂದ್
ದಿನಂಪ್ರತಿ 3 ದೇಖಾವೆಗಳು.

ಪ್ರಭಾತ್
ಇರುವರ್ ಉಳ್ಳಂ (ತಮಿಳು)
ಶಿವಾಜಿ ಗಣೇಶನ್—ಸರೋಜಾದೇವಿ
ರಂಗರಾವ್—ಎಂ. ಆರ್. ರಾಧಾ
ದಿನಂಪ್ರತಿ 3 ದೇಖಾವೆಗಳು.

ರಾಮಕಾಂತಿ — 2ನೇ ವಾರ
ಲವ-ಕುಶ (ತಮಿಳು)
ಪೂರ್ಣ ಗೇವಾಕಲರ್
ಎನ್. ಟಿ. ರಾಮರಾವ್—ಅಂಜಲಿ
ಜೆಮಿನಿ ಗಣೇಶನ್—ಎಂ. ಆರ್. ರಾಧಾ
ದಿನಂಪ್ರತಿ 3 ದೇಖಾವೆಗಳು.

ಬಾಲಾಜಿ — ಕಡೇ 3ನೇ ವಾರ
ಕಲೈ ಅರಸಿ
(ತಮಿಳು)
ಎಂ. ಜಿ. ಆರ್.-ಭಾನುಮತಿ-ವೀರಪ್ಪ
ದಿನಂಪ್ರತಿ 3 ದೇಖಾವೆಗಳು

ಜ್ಯೋತಿ
ಜೀವನ ತರಂಗ (ಕನ್ನಡ)
ರಾಜಕುಮಾರ್—ಲೀಲಾವತಿ
ರಾಜಾಶಂಕರ್—ನರಸಿಂಹರಾಜು
ದಿನಂಪ್ರತಿ 3 ದೇಖಾವೆಗಳು

ನ್ಯೂ ಚಿತ್ರಾ
ಉಮರ್ ಖೈದ್
(ಹಿಂದಿ)
ಶೇಕ್‌ಮುಖ್ತಾರ್—ನಜೀಮಾ
ದಿನಂಪ್ರತಿ 3 ದೇಖಾವೆಗಳು.



ಬಿ. ಎಸ್. ರಂಗಾರವರು ನಿರ್ಮಾಪಕರು ಮತ್ತು ನಿರ್ದೇಶಕರು. ಚಿತ್ರವು ಒಂದು ವರ್ಷದಿಂದ ತಯಾರಾಗುತ್ತಲಿದೆ.

ಬಿಸ್ವಜೀತ್— ವಹೀದಾ ರೆಹಮಾನ್

"ಬೀಸ್ ಸಾಲ್ ಬಾದ್" ತಯಾರಕರು ಈಗ ತಮ್ಮ ಎರಡನೆಯ ಚಿತ್ರವಾದ "ಕೋಹರಾ"ದಲ್ಲಿಯೂ ಬಿಸ್ವಜೀತ್ ಮತ್ತು ವಹೀದಾ ರೆಹಮಾನ್ ಜೊತೆಯನ್ನೇ ಆರಿಸಿದ್ದಾರೆ. ಚಿತ್ರದ ಆರಂಭಿಕ ಚಿತ್ರೀಕರಣವು ಈಗಾಗಲೇ ಪ್ರಾರಂಭವಾಗಿದೆ. ಇತರ ನಟನಟಿಯರು ಲಲಿತಾ ಪವಾರ್ ಮದನ್‌ಪುರಿ, ಚಾಂದ್ ಉಸ್ಮಾನಿ ಮತ್ತು ಆಶೀತ್‌ಸೇನ್. "ಬೀಸ್ ಸಾಲ್ ಬಾದ್"ನ ನಿರ್ದೇಶಕರಾದ ಬಿರೆನ್ ನಾಗ್‌ರವರೇ ಈ ಚಿತ್ರವನ್ನು ದಿಗ್ದರ್ಶಿಸುವ. ನಿರ್ಮಾಪಕರು ಹೇಮಂತಕುಮಾರ್.

'ತಾಜ್ ಮಹಲ್' ಹೊಸ ದಾಖಲು ಸ್ಥಾಪಿಸಿತು!

ಪುಷ್ಪಾ ಪಿಕ್ಚರ್ಸ್‌ರವರ 'ತಾಜ್ ಮಹಲ್' ಹಿಂದೀ ವರ್ಣಚಿತ್ರವು ಮುಂಬಯಿಯಲ್ಲಿ ಎರಡು ಲಕ್ಷಕ್ಕೂ ಮಿಕ್ಕಿದ ಹಣವನ್ನು ಒಂದೇ ವಾರದಲ್ಲಿ ಸಂಪಾದಿಸುವುದರೊಂದಿಗೆ ಹೊಸ ದಾಖಲೆಯನ್ನೇ ಸ್ಥಾಪಿಸಿದೆ. ಹಿಂದಿನ ಅತ್ಯುನ್ನತ ದಾಖಲೆಯು (ಮುಂಬಯಿಯಲ್ಲಿ) "ಬೀಸ್ ಸಾಲ್ ಬಾದ್" ಚಿತ್ರದಿಂದ ಸ್ಥಾಪಿಸಲ್ಪಟ್ಟಿತ್ತು (ರೂ. 1,64,581-31). 'ತಾಜ್ ಮಹಲ್' ಚಿತ್ರದಲ್ಲಿ ಪ್ರದೀಪ್ ಕುಮಾರ್, ಬೀನಾರಾಯ್ ಪ್ರಧಾನ ಪಾತ್ರವರ್ಗದಲ್ಲಿದ್ದಾರೆ. ರೋಶನ್ ಸಂಗೀತವನ್ನು ನೀಡಿದ್ದಾರೆ.

ಶಶಿಕಪೂರನ ನಶೀಬು!

ಒಮ್ಮೆ ಶಶಿಕಪೂರ್ ತನ್ನ ತಂದೆ ಪೃಥ್ವಿರಾಜ್‌ಕಪೂರ್ ಮತ್ತು ಸಹೋದರರಾದ ರಾಜ್‌ಕಪೂರ್ ಮತ್ತು ಶಮ್ಮಿಕಪೂರರೊಡನೆ ಕೊಲ್ಲಾಪುರಕ್ಕೆ ಹೋಗಿದ್ದನು. ಅಲ್ಲಿ ಏರ್ಪಟ್ಟಿದ್ದ ಸಂಗೀತ ಕಾರ್ಯಕ್ರಮದಲ್ಲಿ ರಾಜ್ ಮತ್ತು ಶಮ್ಮಿಕಪೂರ್ ಚೆನ್ನಾಗಿ ಹಾಡಿ ಸಭಿಕರನ್ನು ಸಂತೋಷಗೊಳಿಸಿದರು. ಸಭಿಕರು ಶಶಿಕಪೂರನನ್ನು ಹಾಡಬೇಕೆಂಬುದಾಗಿ ವಿನಂತಿಸಿಕೊಂಡರು. ಜನರ ಒತ್ತಾಯಕ್ಕೆ ಕಟ್ಟುಬಿದ್ದು ಶಶಿಕಪೂರ್ ಹಾಡಬೇಕಾಯಿತು. ಅವನು ಹಾಡುತ್ತಿದ್ದಂತೆ ಜನರು ಬಿದ್ದು ಬಿದ್ದು ನಗತೊಡಗಿದರು! ಕೂಡಲೇ ರಾಜ್‌ಕಪೂರ್ ಜನರನ್ನುದ್ದೇಶಿಸಿ, ಇನ್ನು ಮುಂದೆ ನಕ್ಕವರು ಶಶಿಕಪೂರನಿಗೆ ತಲಾ ಒಂದಾಣೆಯಂತೆ ಕೊಡಬೇಕಾಗುವುದೆಂದು ಹೇಳಿದನು. ಶಶಿಕಪೂರ್ ಹಾಡನ್ನು ಮುಂದುವರಿಸಿದನು. ಹಾಡು ಮುಗಿಯುವಾಗ ಜನರು ನಕ್ಕುದಕ್ಕೆ ದಂಡನೆಯಾಗಿ ಶಶಿಕಪೂರ್ ನಾಲ್ಕು ರೂಪಾಯಿಗಳನ್ನು ಸಂಗ್ರಹಿಸಿದನು!

ನಾನ್ ವಣಂಗುಂ ದೈವಂ

ಸತ್ಯನಾರಾಯಣ ಪಿಕ್ಚರ್ಸ್‌ರವರು ಸುದೀರ್ಘ ಕಾಲದಿಂದ ತಯಾರಿಸುತ್ತಿದ್ದ ತಮಿಳು ಚಿತ್ರ "ನಾನ್ ವಣಂಗುಂ ದೈವಂ" ಈಗ ಪೂರ್ತಿಗೊಂಡಿದ್ದು ಬೇಗನೇ ತೆರೆಗಾಣಲಿದೆ. ಶಿವಾಜಿ ಗಣೇಶನ್, ಪದ್ಮಿನಿ ಮುಖ್ಯ ಪಾತ್ರಗಳಲ್ಲಿದ್ದಾರೆ.

ಪದ್ಮಿನಿ ಅಭಿನಯಿಸಿದ ಇನ್ನೊಂದು ಚಿತ್ರ "ಕಾಟ್ಟು ರೋಜಾ" ಪೂರ್ತಿಗೊಂಡಿದ್ದು ಬಿಡುಗಡೆಗೆ ಕಾದಿದೆ. ಪಾತ್ರಧಾರಿಗಳು—ರಾಜೇಂದ್ರನ್. ಪದ್ಮಿನಿ, ತಂಗವೇಲು, ಎಂ. ಆರ್. ರಾಧಾ, ಜಿ. ಶಕುಂತಲಾ, ಜಿ. ವರಲಕ್ಷ್ಮಿ ಮತ್ತು ವಿ. ಕೆ. ರಾಮಸ್ವಾಮಿ.

ಶಾಭಾಸ್ ಮೀನಾ!

ಇತ್ತೀಚೆಗೆ ಚಿತ್ರಕಲಾವಿದರು ರಾಷ್ಟ್ರೀಯ ರಕ್ಷಣಾ ನಿಧಿಗೆ ನಿಧಿಸಂಗ್ರಹಣೆಗಾಗಿ ಒಂದು ಕಾರ್ಯಕ್ರಮವನ್ನೇರ್ಪಡಿಸಿದ್ದರು. ಆ ಕಾರ್ಯಕ್ರಮಕ್ಕೆ ಪ್ರಧಾನಿ ನೆಹರು ಆಗಮಿಸಿದ್ದರು. ಆ ದಿನ ನೆಹರುರವರನ್ನು ಭೇಟಿಯಾಗಬೇಕೆಂಬ ಬಲವಾದ ಆಸೆ ಮೀನಾಕುಮಾರಿಗೆ ಇತ್ತು. ಆದರೆ ಆ ದಿನ ಅವಳಿಗೆ ಅತ್ಯಂತ ಅಸೌಖ್ಯವಿತ್ತು. ಸ್ಟುಡಿಯೋದಲ್ಲಿ ವಿಪರೀತ ಕಾರ್ಯವಿದ್ದುದೇ ಈ ಅಸೌಖ್ಯದ ಕಾರಣವಾಗಿದ್ದಿತು. ಆ ದಿನವೇ ಅವಳು ಒಂದು ಸಲ ಸ್ಮೃತಿತಪ್ಪಿ ಬಿದ್ದೂ ಇದ್ದಳು. ಹೀಗೆ ಪರಿಸ್ಥಿತಿಯಿದ್ದರೂ ಕೂಡ ಆಕೆ ನೆಹರೂರವರನ್ನು ಭೇಟಿಯಾಗಬೇಕೆಂಬ ಉದ್ದೇಶದಿಂದ ಆ ಕಾರ್ಯಕ್ರಮಕ್ಕೆ ಹೋದಳು. ಅವಳ ಆಸೆ ಪೂರಯಿಸಿತು. ನೆಹರೂ ಅವಳೊಡನೆ ಕೆಲವು ಮಾತುಗಳನ್ನು ಬಹಳ ಆದರದಿಂದ ಆಡಿದರು. ಮೀನಾಕುಮಾರಿಗೆ ತೃಪ್ತಿಯೆನಿಸಿತು. ಮನೆಗೆ ಹಿಂದುರುಗಿದ ಮೀನಾಕುಮಾರಿ ತಿರುಗಿ ಸ್ಮೃತಿತಪ್ಪಿ ಬಿದ್ದುಬಿಟ್ಟಳು. ಆದರೆ ಡಾಕ್ಟರ್‌ರ ಉಪಚಾರಗಳಾದ ಬಳಿಕ ಚೇತರಿಸಿಕೊಂಡಳು.

ಫಿರ್ ಬಸಾಕೆ ದೇಖೋ

ರತ್ನದೀಪ್ ಪಿಕ್ಚರ್ಸ್‌ರವರ "ಫಿರ್ ಬಸಾಕೆ ದೇಖೊ" ಚಿತ್ರಕ್ಕಾಗಿ ಇತ್ತೀಚೆಗೆ ಎಂಟು ದಿನಗಳ ಚಿತ್ರೀಕರಣವು ಜರಗಿತು. ಚಿತ್ರೀಕರಣದಲ್ಲಿ ದಾಕ್ಷಿಣಾತ್ಯ ತಾರೆ ಸಾವಿತ್ರಿ, ರಾಜಶ್ರೀ, ಮಹಮೂದ್, ಮೀನೂ, ಮುಮ್ತಾಜ್, ಲಲಿತಾಪವಾರ್, ಲೀಲಾ ಮಿಸ್ರಾ ಭಾಗವಹಿಸಿದ್ದರು.

ಚಿತ್ರದ ನಾಯಕನ ಪಾತ್ರದಲ್ಲಿ ಮನೋಜ್ ಇದ್ದಾರೆ. ಸುದೇಶ್‌ಕುಮಾರ್, ಶ್ಯಾಮಾ ಮತ್ತು ಜೂನಿಯರ್ ಚಿತ್ರದ ಇತರ ಮುಖ್ಯವಾದ ಪಾತ್ರಗಳಲ್ಲಿದ್ದಾರೆ. ರಾಜೇಂದ್ರಕೃಷ್ಣ ಬರೆದ ಗೀತೆಗಳಿಗೆ ಚಿತ್ರಗುಪ್ತ ಸಂಗೀತ ಜೋಡಣೆಯನ್ನು ಮಾಡಿರುವರು.

ಸಹೇಲಿ

ಪ್ರದೀಪ್‌ಕುಮಾರ್, ಕಲ್ಪನಾ, ವಿಜಯ ಚೌಧರಿ ಮತ್ತು ರಾಜೇಂದ್ರನಾಥ್ ಭಾಗವಹಿಸಿದ್ದ ಕೆಲವಾರು ಹಾಸ್ಯ ದೃಶ್ಯಗಳನ್ನು "ಸಹೇಲಿ" ಚಿತ್ರಕ್ಕಾಗಿ ಇತ್ತೀಚೆಗೆ ಚಿತ್ರೀಕರಿಸಿಕೊಳ್ಳಲಾಯಿತು. "ಸಹೇಲಿ"ಯ ನಿರ್ಮಾಪಕರು ಎಸ್. ಸಿ. ಪೋದಾರ್. ಕಲ್ಯಾಣ್‌ಜೀ ಆನಂದ್‌ಜೀಯವರ ಸಂಗೀತವಿದೆ.

ದೇವಾನಂದ್ — ಆಶಾಪರೇಖ್

ಜಾಲ್ ಮಿಸ್ತ್ರಿಯವರ "ಕಹಿಂ ಓರ್ ಚಲ್" ಚಿತ್ರವು ಮುಕ್ಕಾಲು ಭಾಗದಷ್ಟು ಪೂರ್ತಿಗೊಂಡಿದೆಯೆಂದು ವಾರ್ತೆ. ಚಿತ್ರದ ತಾರಾಗಣದಲ್ಲಿ ದೇವಾನಂದ್ ಆಶಾಪರೇಖ್, ಶುಭಾಖೋಟೆ, ಮದನ್‌ಪುರಿ, ಸುಂದರ್ ಇದ್ದಾರೆ. ಗೀತೆಗಳನ್ನು ಶೈಲೇಂದ್ರ ಮತ್ತು ಹಸ್ರತ್ ಜೈಪುರಿಯವರು ಬರೆದಿದ್ದಾರೆ. ಶಂಕರ್ ಜೈಕಿಷನ್ ಸಂಗೀತವನ್ನು ನೀಡಿದ್ದಾರೆ. ವಿಜಯಾನಂದ್ ನಿರ್ದೇಶಕರು.

ಹಾಡಿನ ಧ್ವನೀಕರಣ

ಶರವಣ ಫಿಲಿಮ್ಸ್‌ರವರ "ರಾಜ್ ಕುಮಾರ್" ಹಿಂದೀ ಚಿತ್ರಕ್ಕಾಗಿ ಮಹಮದ್ ರಫಿಯಿಂದ ಹಾಡಲ್ಪಟ್ಟ ಗೀತೆಯೊಂದನ್ನು ಶಂಕರ್ ಜೈಕಿಷನ್‌ರವರ ಸಂಗೀತ ನಿರ್ದೇಶನದಲ್ಲಿ ರೆಕಾರ್ಡ್ ಮಾಡಲಾಯಿತು. ಚಿತ್ರದ ತಾರಾಗಣದಲ್ಲಿ ಶಮ್ಮಿಕಪೂರ್ ಸಾಧನಾ, ಪೃಥ್ವೀರಾಜ್ ಕಪೂರ್, ಪ್ರಾಣ್, ಓಂಪ್ರಕಾಶ್ ಇದ್ದಾರೆ.

K. S. S.

Printed at The Prabhat Printers, Ltd., Mangalore and Edited & Published at Prabhat Office, Car Street, Mangalore by K.V.Shenoy.